ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 78 ಸಂಚಿಕೆ- 78 | PAGE- 8 ಪುಟ-8 | ಗುರುವಾರ 01.05.2025 | RS.2/- ಬೆಲೆ 2/-

# ಜನಗಣತಿ ಜೊತೆ ಜಾತಿಗಣತಿ ಕೇಂದ್ರದ ಘೋಷಣೆ

ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಏ.30: ಮುಂದಿನ ರಾಷ್ಟ್ರೀಯ ಜನಗಣತಿಯಲ್ಲಿ ಜಾತಿ ಜನಗಣತಿಯನ್ನು "ಪಾರದರ್ಶಕ ರೀತಿಯಲ್ಲಿ" ಸೇರಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಘೋಷಿಸಿದರು.

ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು."ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯು ಮುಂಬರುವ ಜನಗಣತಿಯಲ್ಲಿ ಜಾತಿ ಎಣಿಕೆಯನ್ನು ಸೇರಿಸಲು ನಿರ್ಧರಿಸಿದೆ"ಎಂದು ಕೇಂದ್ರ ಸಚಿವರು ಬುಧವಾರ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.ಜನಗಣತಿ ಕಾರ್ಯ ಏಪ್ರಿಲ್



2020 ರಲ್ಲಿ ಪ್ರಾರಂಭವಾಗಬೇಕಿತ್ತು ಆದರೆ ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ವಿಳಂಬವಾಯಿತು. 10 ವರ್ಷಗಳ ವೇಳಾಪಟ್ಟಿಯ ಪ್ರಕಾರ ಈ ಕಾರ್ಯ ನಡೆದಿದ್ದರೆ, ವರದಿಯು 2021 ರಲ್ಲಿ ಪ್ರಕಟವಾಗುತ್ತಿತ್ತು. ಈಗ 2026ರಲ್ಲಿ ಜನಗಣತಿ ಕಾರ್ಯ ನಡೆವ ಸಂಭವವಿದೆ.

ಸಂಪುಟದ ದೊಡ್ಡ ನಿರ್ಧಾರವನ್ನು ಘೋಷಿಸುವಾಗ, ವೈಷ್ಣವ್ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಪಕ್ಷ ಯಾವಾಗಲೂ ಜಾತಿ ಜನಗಣತಿಯನ್ನು ವಿರೋಧಿಸುತ್ತದೆ ಎಂದು ಹೇಳಿದರು. ಅವರು ಇಂಡಿ ಬ್ಲಾಕ್ ಪಕ್ಷಗಳ ಮೇಲೆ ವಾಗ್ದಾಳಿ ಮಾಡಿದರು. ಅವರು ರಾಜಕೀಯ ಲಾಭಕ್ಕಾಗಿ ಜಾತಿ ಆಧಾರಿತ ಜನಸಂಖ್ಯಾ ಎಣಿಕೆಯನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

"ಕಾಂಗ್ರೆಸ್ ಸರ್ಕಾರಗಳು ಯಾವಾಗಲೂ ಜಾತಿ ಜನಗಣತಿಯನ್ನು ವಿರೋಧಿಸಿವೆ. 2010 ರಲ್ಲಿ, ದಿವಂಗತ ಡಾ. ಮನಮೋಹನ್ ಸಿಂಗ್ ಸಂಸತ್ತಿನಲ್ಲಿ ಜಾತಿ ಜನಗಣತಿಯ ವಿಷಯವನ್ನು ಸಚಿವ ಸಂಪುಟದಲ್ಲಿ ಪರಿಗಣಿಸಬೇಕು ಎಂದು ಹೇಳಿದರು. ಈ ವಿಷಯವನ್ನು ಪರಿಗಣಿಸಲು ಸಚಿವರ ಗುಂಪನ್ನು ರಚಿಸಲಾಯಿತು. ಹೆಚ್ಚಿನ ರಾಜಕೀಯ ಪಕ್ಷಗಳು ಜಾತಿ ಜನಗಣತಿಯನ್ನು ಶಿಫಾರಸು ಮಾಡಿವೆ. ಇದರ ಹೊರತಾಗಿಯೂ, ಕಾಂಗ್ರೆಸ್ ಸರ್ಕಾರ ಸಾಮಾಜಿಕ ಆರ್ಥಿಕ ಸಮೀಕ್ಷೆ ಎಂದು ಕರೆಯಲ್ಪಡುವ ಸಮೀಕ್ಷೆಯನ್ನು ನಡೆಸುವುದು ಸೂಕ್ತವೆಂದು ಭಾವಿಸಿದೆ" ಎಂದು ವೈಷ್ಣವ್ ಹೇಳಿದರು.

## ಪಾಕಿಸ್ತಾನವನ್ನು ಹತೋಟಿಯಲ್ಲಿಡಲು ಪ್ರಧಾನಿಗೆ ಬೆಂಬಲ: ಮಲ್ಲಿಕಾರ್ಜುನ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಏ.30:ಯಾವುದೇ ರೀತಿಯಲ್ಲಿ ಭಾರತ ದೇಶದ ಸೈನಿಕರಿಗಾಗಲಿ, ಜನರಿಗಾಗಲಿ ತೊಂದರೆ ಆಗಬಾರದು. ಪಾಕಿಸ್ತಾನವನ್ನ ಹತೋಟಿಯಲ್ಲಿ ಇಡಲು ನಾವು ಪ್ರಧಾನಿಗೆ ಬೆಂಬಲ ಕೊಟ್ಟಿದ್ದೇವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.ಸದಾಶಿವನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈಗಾಗಲೇ ನಾವು ಅವರಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಜನರ ಅನಿಸಿಕೆ ಹಾಗೂ ದೇಶದಲ್ಲಿ ಇರುವ ಭಾವನೆ ಜೊತೆಗೆ ಎಲ್ಲಾ ಪಕ್ಷಗಳು ಅವರಿಗೆ ಅಧಿಕಾರ ನೀಡಿದ್ದೇವೆ. ಪಾಕಿಸ್ತಾನದ ವಿರುದ್ಧ ಕಾರ್ಯಾಚರಣೆ ಅಧಿಕಾರ ಮಾಡಲು ಕೊಟ್ಟಿದ್ದೇವೆ. ಅದನ್ನು ಅವರು ಉಪಯೋಗ ಮಾಡಿಕೊಳ್ಳಲಿ, ತಮ್ಮ ಕೆಲಸವನ್ನು ಅವರು ಮಾಡಲಿ. ದೇಶದ ರಕ್ಷಣೆ ಮಾಡುವುದಕ್ಕೆ ಆದಷ್ಟು ಬೇಗನೆ ಒಳ್ಳೆಯ ಹೆಜ್ಜೆಯನ್ನು ಇಡಬೇಕು ಎಂದರು. ನಾವು ಎಲ್ಲಾ ಪಕ್ಷದವರು ಒಂದಾಗಿ ಅಧಿವೇಶನ ಕರೆಯಬೇಕು ಎಂದು ಹೇಳಿದ್ದೇವೆ. ಪ್ರಧಾನ



ಮಂತ್ರಿಗಳು ಅಧಿವೇಶನದಲ್ಲಿ ಇರಬೇಕು. ಪ್ರಧಾನಮಂತ್ರಿಗಳು ಯಾವೆಲ್ಲ ಕ್ರಮ ತೆಗೆದುಕೊಂಡಿದ್ದಾರೆ ಅದನ್ನು ಹೇಳಬೇಕು. ಕೆಲವೊಂದು ಗುಪ್ತ ಕಾರ್ಯಸೂಚಿಗಳಿರುತ್ತದೆ, ಅದನ್ನು ಮಾಡಲಿ. ಇವತ್ತಿನ ಪರಿಸ್ಥಿತಿ ಏನಿದೆ, ಅವರು ಏನು ಮಾಡಬೇಕು ಎಂಬುದು ಮನಸ್ಸಿನಲ್ಲಿದೆ. ಅದನ್ನು ಫ್ಲೋರ್ ಲೀಡರ್ಸ್ಗೆ ಕರೆದು ಮಾತನಾಡಿಸುವುದು ಒಳ್ಳೆಯದು ಎಂದು ಹೇಳಿದರು. ಮೋದಿ ತಲೆ ಇಲ್ಲದ ಫೋಟೋ ಹಾಕಿ ಗಾಯಬ್ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಆ ವಿಚಾರ ನನಗೆ ಗೊತ್ತಿಲ್ಲ. ಯಾವುದೇ ವ್ಯಕ್ತಿಗೆ, ಯಾರೇ ಇರಲಿ, ಅದು ಪ್ರಧಾನಮಂತ್ರಿಯೇ ಇರಲಿ, ಯಾವುದೇ ಮುಖಂಡರಿಗೇ ಇರಲಿ, ಅವರ ಗೌರವಕ್ಕೆ ಧಕ್ಕೆ ತರುವಂತ ಕೆಲಸ ಮಾಡಬಾರದು. ಅವರಾಗಲಿ ನಮ್ಮವರೇ ಆಗಲಿ ಈ ರೀತಿ ಮಾಡೋದು ಸರಿಯಲ್ಲ ಎಂದು ತಿಳಿಸಿದರು.

ಪಹಲ್ಗಾಮ್ ದಾಳಿಯ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡದಂತೆ ಕೈ ನಾಯಕರಿಗೆ ಸೂಚನೆ ವಿಚಾರವಾಗಿ ಮಾತನಾಡಿದ ಅವರು, ಅದರ ಸುತ್ತೋಲೆ ಹೊರಡಿಸಿದ್ದೇವೆ.ದೆಹಲಿಯಲ್ಲಿ ವರ್ಕಿಂಗ್ ಕಮಿಟಿ ಸಭೆ ಮಾಡಿದ್ದೆವು. ವರ್ಕಿಂಗ್ ಕಮಿಟಿಯಲ್ಲಿ ನಿರ್ಣಯ ತೆಗೆದುಕೊಂಡಿದ್ದೆವು.ಆ ನಿರ್ಣಯವನ್ನ ಎಲ್ಲರೂ ಪಾಲಿಸಬೇಕು. ಇದನ್ನ ಮತ್ತೊಮ್ಮೆ ಅವರಿಗೆ ಮನವರಿಕೆ ಮಾಡಿದ್ದೇವೆ. ಎಲ್ಲರೂ ಅದನ್ನು ಫಾಲೋ ಮಾಡಬೇಕು ಎಂದು ಸೂಚನೆ ನೀಡಿದರು.



ಬೆಂಗಳೂರು:ವಿಶ್ವಗುರು ಬಸವಣ್ಣನವರ ಜಯಂತಿ ಪ್ರಯುಕ್ತ ವಿಧಾನಸೌಧದ ಮುಂಭಾಗದಲ್ಲಿರುವ ಬಸವೇಶ್ವರ ಪ್ರತಿಮೆಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಎಂ.ಬಿ.ಪಾಟೀಲ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

## ಭಯೋತ್ಪಾದನೆಯನ್ನೂ ನಾಶ ಮಾಡಿ:ಸಿಎಂ

ಮಲ್ಲಮ್ಮನುಡಿವಾರ್ತೆ ಬಾಗಲಕೋಟೆ,ಏ.30- ಪಾಕಿಸ್ತಾನದ ಮೇಲೆ ಯುದ್ಧ ಮಾಡುವುದಾದರೆ ಮಾಡಲಿ ಅದಕ್ಕೆ ನನ್ನ ವಿರೋಧವೇನಿಲ್ಲ. ಯುದ್ಧ ಮಾಡಬೇಡಿ ಎಂದು ನಾನು ಹೇಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕೂಡಲಸಂಗಮದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುದ್ಧ ಮಾಡುವುದು ಅನಿವಾರ್ಯವಾದರೆ ಮಾಡಲಿ. ಅದರ ಜೊತೆ ಭಯೋತ್ಪಾದನೆಯನ್ನು ನಾಶ ಮಾಡಬೇಕು. ಅದನ್ನು ಕೇಂದ್ರ ಸರಕಾರ ಮಾಡಬೇಕು ಎಂದರು. ಹಿಂದೆ 1971 ರಲ್ಲಿ ಪಾಕಿಸ್ತಾನ ಮೇಲೆ ಯುದ್ಧ ಸಾರಿ ಇಡೀ ಪಾಕಿಸ್ತಾನವನ್ನು ಬಗ್ಗು ಬಡಿದಿದ್ದರು. 80 ಸಾವಿರ ಪಾಕಿಸ್ತಾನಿ ಸೈನಿಕರು ಶರಣಾಗತರಾಗಿದ್ದರು.

ಸೋಸಿಯಲ್ ಮೀಡಿಯಾದಲ್ಲಿ ಅಲ್ಲ ಸಲ್ಲದ ವಿಚಾರಗಳನ್ನು

ಹಾಕಬಾರದು. ವಾಕ್ ಮತ್ತು ವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಏನೆಲ್ಲಾ ಮಾಡಬಾರದು ಎಂದು ಸಿದ್ದರಾಮಯ್ಯ ಹೇಳಿದರು. ಸಚಿವರಾದ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪೂರ, ಶಾಸಕರಾದ ವಿಜಯಾನಂದ ಕಾಶಪ್ಪನವರ, ಜೆ.ಟಿ.ಪಾಟೀಲ, ಎಚ್.ವಾಯ್. ಮೇಟಿ ಇದ್ದರು.

## ಮನುವಾದಿಗಳು ಬಸವತತ್ವದ ವಿರೋಧಿಗಳು

### 'ಮನ್ ಕಿ ಬಾತ್'-ಸರ್ವಾಧಿಕಾರಿ ಲಕ್ಷಣ: ಸಿಎಂ.ಸಿದ್ಧರಾಮಯ್ಯ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ(ಕೂಡಲಸಂಗಮ) ಏ.29 :ಪ್ರಜಾಪ್ರಭುತ್ವದಲ್ಲಿ ಚರ್ಚೆ ಇರುತ್ತದೆ. ಸರ್ವಾಧಿಕಾರದಲ್ಲಿ ಚರ್ಚೆಗೆ ಯಾವುದೇ ಅವಕಾಶ ಇರೋದಿಲ್ಲ. ಹಾಗೆಯೇ 'ಮನ್ ಕಿ ಬಾತ್' ನಲ್ಲಿ ಚರ್ಚೆ ಇಲ್ಲ. ಏಕಮುಖವಾಗಿ ಹೇಳಿದ್ದನ್ನು ಕೇಳಬೇಕು ಎನ್ನುವ ಧೋರಣೆ ಇದೆ. ಇದು ಸರ್ವಾಧಿಕಾರಿ ಲಕ್ಷಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಬಾಗಲಕೋಟೆ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಕೂಡಲಸಂಗಮದಲ್ಲಿ ಬಸವ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಅನುಭವ ಮಂಟಪ-ಬಸವಾದಿ ಶರಣರ ವೈಭವ ಕಾರ್ಯಕ್ರಮವನ್ನು ಬುಧವಾರ ಉದ್ಘಾಟಿಸಿ, ಬಸವ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯೆಂದರೆ ಚರ್ಚೆಗೆ ಅವಕಾಶ ಇರುತ್ತದೆ. ಸರ್ವಾಧಿಕಾರತ್ವದಲ್ಲಿ ಯಾವುದೇ ಚರ್ಚೆಗೆ ಅವಕಾಶ ಇಲ್ಲ. ಏಕಮುಖವಾಗಿ ನಾನು ಹೇಳಿದ್ದನ್ನು ನೀವು ಕೇಳಿ ಎನ್ನುವುದಷ್ಟೆ. ಮನ್ ಕಿ ಬಾತ್ ತರಹ. ನಾನು ಹೇಳ್ತೀನಿ, ನೀವು ಕೇಳಿ ಅನ್ನೋದು ಸರ್ವಾಧಿಕಾರಿ ಧೋರಣೆ ಎಂದು ಸಿಎಂ ಟೀಕಿಸಿದರು.

ವಚನ ಎಂದರೆ ಮಾತು. ಶರಣರ ವಚನಗಳು ಜನರ ಭಾಷೆಯಲ್ಲಿವೆ. ಆದ್ದರಿಂದ ವಚನ ಸಾಹಿತ್ಯ ಜನರ ಸಾಹಿತ್ಯ ಆಗಿದೆ. ಹಿಂದೆ ಸಂಸ್ಕೃತ ಕಲಿತರೆ ಕಲಿಯುವ ಶೂದ್ರರ ಕಿವಿಗೆ ಕಾದ ಸೀಸ ಹಾಕುವ ಶಿಕ್ಷೆ ಇತ್ತು. ಇದರಿಂದಲೇ ಭಾರತೀಯ ಶೂದ್ರ ಸಮುದಾಯ ಅಕ್ಷರ ಸಂಸ್ಕೃತಿಯಿಂದ ವಂಚಿತರಾದರು. ಹೀಗಾಗಿ ಶಿಕ್ಷಣ ಇಲ್ಲದ ಕಾರಣಕ್ಕೆ ಅಸಮಾನತೆ ಬೆಳೆಯಿತು ಎಂದ ಸಿದ್ದರಾಮಯ್ಯ, ಬಸವಣ್ಣನವರು ಅರ್ಥ ಆಗಬೇಕು ಅಂದ್ರೆ ಮೊದಲು ಕರ್ಮಸಿದ್ಧಾಂತ ಮತ್ತು ಹಣೆಬರಹ ಎನ್ನುವ ಮೌಢ್ಯವನ್ನು ಬಿಡುವ ಶಪಥ ಮಾಡಬೇಕು ಎಂದು ಕರೆ ನೀಡಿದರು.

ಇವನಾರವ ಇವನಾರವ, ಇಂವ

(2ನೇ ಪುಟ ನೋಡಿ)

## ಸಾಮಾಜಿಕ ಸುಧಾರಣೆಗೆ ವಚನಕಾರರ ಕೊಡುಗೆ ಅನನ್ಯ



ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್ : ಸಾಮಾಜಿಕ ಸುಧಾರಣೆಗೆ ವಿಶ್ವಗುರು ಬಸವಣ್ಣನವರ ಹಾಗೂ ವಚನಕಾರರ ಕೊಡುಗೆ ಅನನ್ಯವಾಗಿದೆ ಎಂದು ಅಖಿಲ ಭಾರತೀಯ ಗೋಂಧಳಿ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷ ಡಾ. ಸಿದ್ರಾಮ್ ಡಿ. ವಾಗ್ಮಾರೆ ಹೇಳಿದರು.

(2ನೇ ಪುಟ ನೋಡಿ)

## ಜಾತಿ ಗಣತಿ ಜೊತೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ: ಸಿದ್ದರಾಮಯ್ಯ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಏ.30:ಜಾತಿ ಗಣತಿ ಜೊತೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ ಎಂದು ಸಿಎಂ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿದ ಅವರು, ಕೇಂದ್ರ ಸರ್ಕಾರದ ಜಾತಿಗಣತಿ ನಿರ್ಧಾರವನ್ನು ಸ್ವಾಗತಿಸಿದ್ದಾರೆ.ಜನಗಣತಿ ಜೊತೆಯಲ್ಲಿ ಜಾತಿ ಗಣತಿಯನ್ನೂ ನಡೆಸುವ ಕೇಂದ್ರ ಸರ್ಕಾರದ ತೀರ್ಮಾನವನ್ನು ನಮ್ಮ ಸರ್ಕಾರ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಇದೇ ಸಂದರ್ಭದಲ್ಲಿ ಜಾತಿ ಗಣತಿ ಜೊತೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನೂ ನಡೆಸಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕದಲ್ಲಿ ನಾವು ಕೇವಲ ಜಾತಿ ಗಣತಿ ನಡೆಸದೇ ಅದರ ಜೊತೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಿದ್ದೇವೆ. ಈ ದತ್ತಾಂಶಗಳ ಆಧಾರದಲ್ಲಿ ಈಗಿನ ಮೀಸಲಾತಿ ನೀತಿಯನ್ನು ಪರಿಷ್ಕರಿಸಿ ಅದರ ಮಿತಿಯನ್ನು ಹೆಚ್ಚಿಸುವ ಪ್ರಯತ್ನ ಕೂಡಾ ನಡೆದಿದೆ. ಜಾತಿ ಗಣತಿಯ

(2ನೇ ಪುಟ ನೋಡಿ)

## ಜಗತ್ತಿನಲ್ಲಿಯೇ ಮೊದಲ ಬಾರಿಗೆ ಸಾಮಾಜಿಕ ಕ್ರಾಂತಿ ಹುಟ್ಟು ಹಾಕಿದವರು ವಿಶ್ವಗುರು ಬಸವಣ್ಣನವರು:ಸಚಿವ ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ ಬೀದರ : ಏ.30:ಜಗತ್ತಿನಲ್ಲಿಯೇ ಮೊದಲ ಬಾರಿಗೆ ಸಾಮಾಜಿಕ ಕ್ರಾಂತಿ ಹುಟ್ಟು ಹಾಕಿದವರು ವಿಶ್ವಗುರು ಬಸವಣ್ಣನವರು ಎಂದು ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ಬುಧವಾರದಂದು ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ 892ನೇ ಜಯಂತಿ ನಿಮಿತ್ಯ ನಗರದ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ, ಷಟಸ್ಥಲ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ನಾವು ಬಸವಣ್ಣನವರ ಪುಣ್ಯಭೂಮಿ ಕಲ್ಯಾಣ ನೆಲದಲ್ಲಿ ನೆಲೆಸಿದ್ದೇವೆ. 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ವಚನ ಕ್ರಾಂತಿಯು ಸಮಾಜದಲ್ಲಿ

(2ನೇ ಪುಟ ನೋಡಿ)

## ಸಂಭ್ರಮದ ಬಸವ ಜಯಂತಿ ಆಚರಣೆ



ಮಲ್ಲಮ್ಮನುಡಿ ವಾರ್ತೆ ಯಾದಗಿರಿ/ ಗುರುಮಠಕಲ್:ಏ.30:ಗುರುಮಠಕಲ್ ತಾಲೂಕಿನಾದ್ಯಂತ ಇಂದು ಮಹಾತ್ಮ ಬಸವೇಶ್ವರರ 892 ನೇಯ ಜಯಂತಿಯನ್ನು ಪಟ್ಟಣದ ಮಹಾತ್ಮ ಬಸವೇಶ್ವರ ವೃತ್ತದಲ್ಲಿ ಇಂದು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಮಹಾತ್ಮ ಬಸವೇಶ್ವರರ 892 ನೇಯ ಜಯಂತಿಯನ್ನು ಆಚರಣೆ ಮಾಡಲಾಯಿತು.ವಿಶೇಷವಾಗಿ ಮಹಾರಾಷ್ಟ್ರದ ಮುಂಬೈ ನಗರದ ಬೊರಿವೇಲಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಂಜಯ್ ಉಪಾಧ್ಯಾಯರವರು ಭಾಗಿಯಾಗಿ ಬಸವಣ್ಣನವರ ಜಯಂತಿ ಕೇವಲ ಆಚರಣೆಗೆ ಸೀಮಿತವಾಗದೆ ಜೀವನದಲ್ಲಿ ಅವರ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮಾತಾನಾಡಿದರು. ಜಯಂತಿಯಲ್ಲಿ ವೀರಶೈವ ಲಿಂಗಾಯತ ಸಮಾಜ ಹಾಗೂ ಮಹಾತ್ಮ ಬಸವೇಶ್ವರ ಕೃಷಿ ಮಾರುಕಟ್ಟೆ ಸದಸ್ಯರು, ಸಾರ್ವಜನಿಕರು ಭಾಗಿಯಾದರು.

## ಸಂಧಾನಕ್ಕೆಂದು ಮುಂಬೈನಿಂದ ಕರೆಸಿ ದಂಪತಿ ಬರ್ಬರ ಹತ್ಯೆ

ಮಲ್ಲಮ್ಮ ನುಡಿ ವಾರ್ತೆ ಬೀದರ. ಏ.30:ಯುವತಿ ವಿಚಾರವಾಗಿ ರಾಜಿ ಪಂಚಾಯಿತಿಗೆಂದು ಮುಂಬೈನಿಂದ ದಂಪತಿಯನ್ನು ಕರೆಸಿಕೊಂಡು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಬೀದರ್ ಜಿಲ್ಲೆಯ ಮಂಠಾಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲೂಕಿನ ಜಾಪರವಾಲಿ ಗ್ರಾಮದ ರಾಜು ಕೊಳಸೂಗೆ (28) ಮತ್ತು ಶಾರಿಕಾ ಕೊಳಸೂಗೆ(24) ಕೊಲೆಯಾದ ದಂಪತಿ.ಜಾಪರವಾಲಿ ಗ್ರಾಮದಲ್ಲಿ ದಂಪತಿ ತಮ್ಮ ಎರಡು ವರ್ಷದ ಮಗುವಿನೊಂದಿಗೆ ವಾಸವಿದ್ದರು.

ಈ ನಡುವೆ ರಾಜುಗೆ ಅದೇ ಗ್ರಾಮದ ಯುವತಿ ಜೊತೆ ಅಕ್ರಮ ಸಂಬಂಧವಿರುವ ವಿಷಯ ತಿಳಿದು ಗ್ರಾಮಸ್ಥರೆಲ್ಲ ಸೇರಿ ರಾಜಿ ಪಂಚಾಯಿತಿ ಮಾಡಿ ದಂಪತಿಯನ್ನು ಊರು ಬಿಟ್ಟು ಮುಂಬೈಗೆ ಕಳುಹಿಸಿದ್ದರು. ಮುಂಬೈಗೆ ಹೋದ 15 ದಿನದ ನಂತರ ರಾಜು ತನ್ನ ಚಾಳಿ ಬಿಡದೆ



ಯುವತಿಯ ಪೋಟೋವನ್ನು ಫೇಸ್‌ಬುಕ್‌ಗೆ ಹಾಕಿದ್ದಾನೆ.

ಇದನ್ನು ಗಮನಿಸಿದ ಯುವತಿಯ ಸಹೋದರರು ಹಾಗೂ ಸಂಬಂಧಿಕರು ರಾಜಿ ಪಂಚಾಯಿತಿಗೆಂದು ರಾಜುನನ್ನು ಮುಂಬೈನಿಂದ ಕರೆಸಿದ್ದಾರೆ. ರಾಜು ಜೊತೆ ಆತನ ಪತ್ನಿ ಹಾಗೂ ಮಗು ಸಹ ಗ್ರಾಮಕ್ಕೆ ನಿನ್ನೆ ಸಂಜೆ ಬಂದಿದ್ದಾಗ ಮಾತಿಗೆ ಮಾತು ಬೆಳೆದು ಜಗಳವಾಗಿದೆ.

ಆ ಸಂದರ್ಭದಲ್ಲಿ ರೊಚ್ಚಿಗೆದ್ದ ಯುವತಿಯ ಸಂಬಂ?ಕರು ಕಬ್ಬು ಕತ್ತರಿಸುವ ಕುಡುಗೋಲು ರಾಜು ಮೇಲೆ ಹಲ್ಲೆ ನಡೆಸಿದ್ದಾರೆ. ಆವೇಳೆ ತಡೆಯಲು ಬಂದ ಶಾರಿಕಾ ಮೇಲೂ ಕುಡುಗೋಲುನಿಂದ ಹಲ್ಲೆ ನಡೆಸಿದ್ದರಿಂದ ಇಬ್ಬರೂ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.

ಅಪ್ಪ-ಅಮ್ಮನ ಸಾವಿನಿಂದ ಎರಡು ವರ್ಷದ ಮಗು ಅನಾಥವಾಗಿದೆ.ಸುದ್ದಿ ತಿಳಿಯುತ್ತಿದ್ದಂತೆ ಮಂಠಾಳ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಕೆಲವರನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

## ವಿಶ್ವಗುರು ಬಸವಣ್ಣನವರು:ಸಚಿವ ಈಶ್ವರ ಖಂಡ್ರೆ

ಸಮಾನತೆ, ಸಾಮಾಜಿಕ ನ್ಯಾಯ, ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಆಗುವಂತೆ ಮಾಡಿತು. ಬಸವಣ್ಣನವರ ವಚನ ಸಾಹಿತ್ಯದ ಮೂಲಕ ಜಾತಿರಹಿತ ಸಮಾಜ, ಸಮ ಸಮಾಜ ಮತ್ತು ಮೇಲು ಕೀಳು ಎಂಬ ಭಾವನೆಗಳು ಹೋಗಲಾಡಿಸಲು ಅವರ ಪ್ರಯತ್ನ ಮಹತ್ವದಾಗಿದೆ. ಇಂದು ನಾವು ಕೂಡ ಬಸವಣ್ಣನವರ ತತ್ವ– ಸಂದೇಶಗಳನ್ನು ಮಾರ್ಗದರ್ಶನವಾಗಿ ಇಟ್ಟಿಕೊಂಡು ಸಮ ಸಮಾಜದ ನಿರ್ಮಾಣ ಮಾಡಬೇಕಾಗಿದೆ ಮತ್ತು ವಚನಗಳ ಆಶಯಗಳನ್ನು ತಿಳಿದುಕೊಂಡು ಸಮಾನತೆಯಿಂದ ಕೂಡಿ ಬಾಳಬೇಕು ಎಂದು ತಿಳಿಸಿದರು.

ಇದಕ್ಕೂ ಮುಂಚೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್, ಮಾಜಿ ಸಚಿವ ಬಂಡೆಪ್ಪ ಖಾಶಂಪೂರ, ನಗರಸಭೆ ಅಧ್ಯಕ್ಷರಾದ ಮಹಮ್ಮದ ಗೌಸ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಾದ ಡಾ.ಗಿರೀಶ ಬದೋಲೆ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ, ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೊಡೆ, ಜೈರಾಜ್ ಖಂಡ್ರೆ, ಆನಂದ ದೇವಪ್ಪ, ಬಾಬು ವಾಲಿ, ಪಂಡಿತ ಚಿದ್ರಿ, ಈಶ್ವರಸಿಂಗ್ ಠಾಕೂರ್, ಸಂಜು ಕುಮಾರ್ ಪಾಟೀಲ್, ಮಾರುತಿ ಬೌದ್ಧೆ, ವಿಜಯಕುಮಾರ ಸೊನಾರೆ ಸೇರಿದಂತೆ ಬಸವ ಅಭಿಮಾನಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

## 'ಮನ್ ಕಿ ಬಾತ್'-ಸರ್ವಾಧಿಕಾರಿ ಲಕ್ಷಣ: ಸಿಎಂ.ಸಿದ್ಧರಾಮಯ್ಯ

ನಮ್ಮವ ಎಂದು ವಚನ ಹೇಳೋದು, ಮತ್ತೆ ಈ ಕಡೆ ಬಂದು ಅವನು ಯಾವ ಜಾತಿ ಎಂದು ಕೇಳೋದು ಈಗಲೂ ನಡೆಯುತ್ತಿದೆ. ಹೀಗಾದರೆ ಬಸವಣ್ಣನವರ ಆಶಯದಂತೆ ಜಾತಿ ನಿರ್ಮೂಲನೆ ಆಗೋದಿಲ್ಲ. ಜಾತಿಗೆ ಚಲನೆಯಿಲ್ಲ. ವರ್ಗಕ್ಕೆ ಚಲನೆ ಇದೆ. ಎಲ್ಲಾ ಜಾತಿಗಳಿಗೂ ಆರ್ಥಿಕ ಚಲನೆ ಸಿಕ್ಕಾಗ ಮಾತ್ರ ಜಾತಿ ನಿರ್ಮೂಲನೆ ಸಾಧ್ಯವಾಗುತ್ತದೆ. ಬಸವಣ್ಣನವರು ಮತ್ತು ಶರಣರು ಕರ್ಮಸಿದ್ಧಾಂತದ ವಿರುದ್ಧ ಹೋರಾಟ ನಡೆಸಿದರು. ಆದರೆ ಈಗ ಶಿಕ್ಷಣವಂತರೇ ಜನ್ಮ ಜನ್ಮಗಳಲ್ಲಿ ನಂಬಿಕೆ ಇಟ್ಟು ಕರ್ಮಸಿದ್ಧಾಂತ ಆಚರಿಸುತ್ತಿದ್ದಾರೆ. ಒಂದು ಕಡೆ ಬಸವ ಜಯಂತಿ ಆಚರಿಸೋದು ಮತ್ತೊಂದು ಕಡೆ ಕರ್ಮಸಿದ್ಧಾಂತ ಆಚರಿಸೋದು ಮಾಡಿದರೆ ಬಸವ ಜಯಂತಿಗೆ ಅರ್ಥ ಬರೋದಿಲ್ಲ ಎಂದು ಅವರು ಹೇಳಿದರು. ಬಸವಣ್ಣನವರ ಆಶಯಗಳು, ಹೇಳಿದ ಮೌಲ್ಯಗಳು ಅಂಬೇಡ್ಕರರವರ ಸಂವಿಧಾನದ ಆಶಯ ಮತ್ತು ಮೌಲ್ಯಗಳು ಒಂದೇ ಆಗಿವೆ. ಇದನ್ನು ಅರ್ಥ ಮಾಡಿಕೊಂಡು ಪಾಲಿಸದೇ ಹೋದರೆ ಸಮಾಜಕ್ಕೆ ಏನನ್ನೂ ಒಳ್ಳೆಯದು ಮಾಡಲು ಸಾಧ್ಯವಿಲ್ಲ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಬಸವಣ್ಣನವರ ಮೌಲ್ಯ ಪಾಲಿಸುವ ಶಪಥ ಮಾಡಿ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಧರ್ಮ ಎಂದರೆ ಭಯಾನಕವಾಗಿ ಏನೇನೋ ಬಿಂಬಿಸುವುದಲ್ಲ. ಬಸವಣ್ಣನವರು ಬಹಳ ಸರಳವಾಗಿ ದಯೆಯೇ ಧರ್ಮದ ಮೂಲವಯ್ಯ ಎಂದಿದ್ದಾರೆ. ಇಷ್ಟು ಸರಳ ಮತ್ತು ಸುಂದರವಾದ ಮೌಲ್ಯವೇ ಧರ್ಮ ಎಂದರು. ಗೋರುಚ ಸಮಿತಿ ವರದಿಯಂತೆ ಅನುಭಾವಿಗಳ ಅನುಭವ ಮಂಟಪ ಮಾಡುವ ಕೆಲಸ ನಮ್ಮಿಂದ ಆಗಿದೆ. ಇದನ್ನು ಈ ವರ್ಷವೇ ಪೂರ್ಣಗೊಳಿಸುತ್ತೇವೆ. ಬಸವಣ್ಣರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು, ಅಕ್ಕಮಹಾದೇವಿ ವಿಶ್ವವಿದ್ಯಾಲಯ ನಾಮಕಾರಣ ಮಾಡಿದ್ದು ನಾವೇ ಎಂದರು.

ಬಸವಾದಿ ಶರಣರ ಆಶಯ ಮತ್ತು ಮೌಲ್ಯಗಳನ್ನು ನಾನು ಜಾರಿಗೆ ತರಲು ಮುಂದಾದರೆ ಅದಕ್ಕೂ ಅಡ್ಡಿ ಪಡಿಸುವವರು, ವಿರೋಧಿಸುವವರು ಇದ್ದಾರೆ. ಆದ್ದರಿಂದ ಸಮಸಮಾಜ ಬೇಕೋ, ಜಾತಿ ಸಮಾಜ ಬೇಕೋ ಎನ್ನುವ ನಿರ್ಧಾರವನ್ನು ಜನರ ತೀರ್ಮಾಣಕ್ಕೆ ಬಿಡುತ್ತೇನೆ ಎಂದ ಮುಖ್ಯಮಂತ್ರಿಗಳು, ಮನುವಾದಿಗಳು ಬಸವತತ್ವದ ವಿರೋಧಿಗಳು. ಮನುಷ್ಯ ತತ್ವಕ್ಕೆ ವಿರುದ್ಧ ಇರುವವರು ಮನುವಾದಿಗಳು. ಮನುಷ್ಯತ್ವ ಪಾಲಿಸುವವರು ಬಸವವಾದಿಗಳು. ತಮಗೆ ಮನುವಾದಿಗಳು ಬೇಕೋ, ಬಸವವಾದಿಗಳು ಬೇಕೋ ನೀವೇ ನಿರ್ಧರಿಸಿ ಎಂದು ಹೇಳಿದರು. ಆರ್ಥಿಕ ಅಸಮಾನತೆ ಗುಲಾಮಗಿರಿ ಬೆಳೆಸುತ್ತದೆ. ಸ್ವಾಭಿಮಾನ ಅಳಿಸುತ್ತದೆ. ಕಾಯಕ ಮತ್ತು ದಾಸೋಹ ಬಸವಾದಿ ಶರಣರು ನಮಗೆ ಕೊಟ್ಟಿರುವ ಆರ್ಥಿಕ ಸಿದ್ಧಾಂತ. ಇದನ್ನು ಪಾಲಿಸಿದರೆ ಮಾತ್ರ ಬಸವ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದ ಅವರು, ಕಲ್ಯಾಣಮ್ಮ ಜನಸ್ಥಳವನ್ನು ಅಭಿವೃದ್ಧಿ ಪಡಿಸುವುದು, ಬಸವಣ್ಣ ನೀಲಾಂಬಿಕೆಯ ವಿಗ್ರಹ ಮಾಡಿಸುವುದು, ಬಸವಣ್ಣನವರ ಪ್ರತಿಮೆ ನಿರ್ಮಿಸುವುದು ಇವೆಲ್ಲ ಕಾರ್ಯಗಳನ್ನು ನಾವು ಮಾಡುತ್ತೇವೆ. ಆದರೆ ನೀವೂ ಸ್ವಲ್ಪ ಬದಲಾವಣೆಗೊಂಡು ಎಲ್ಲರನ್ನೂ ಇಂವ ನಮ್ಮವ ಎನ್ನುವುದನ್ನು ಕಲಿಯಿರಿ ಎಂದರು. ಬೈಲೂರಿನ ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ ಮಾತನಾಡಿದರು. ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿ, ಬಸವ ಭಕ್ತರ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಈಡೇರಿಸುವಂತೆ ಮನವಿ ಮಾಡಿದರು. ಇಳಕಲ್ಲನ ಗುರುಮಹಾಂತ ಸ್ವಾಮೀಜಿ ಸೇರಿದಂತೆ ಅನೇಕ ಜನ ಹರ–ಗುರು ಚರಮೂರ್ತಿಗಳು, ಸಚಿವರಾದ ಎಂ.ಬಿ.ಪಾಟೀಲ, ಶಿವರಾಜ ತಂಗಡಗಿ, ಆರ್.ಬಿ.ತಿಮ್ಮಾಪುರ, ಶಾಸಕರಾದ ಎಚ್.ವಾಯ್.ಮೇಟಿ, ಜೆ.ಟಿ.ಪಾಟೀಲ, ಅಪ್ಪಾಜಿ ನಾಡಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ.ಗಾಯತ್ರಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ., ಜಿಪಂ ಸಿಇಓ ಶಶಿಧರ ಕುರೇರ, ಕಾರ್ಯಕ್ರಮ ಆಚರಣಾ ಸಮಿತಿಯ ಸದಸ್ಯರಾದ ಜ್ಞಾನಪ್ರಕಾಶ ಸ್ವಾಮೀಜಿ, ಡಾ.ಪುರುಷೋತ್ತಮ ಬಿಳಿಮಲೆ, ಡಾ.ಬಿ.ಟಿ.ಲಲಿತಾನಾಯಕ್, ಕೂಡಲಸಂಗಮ ಗ್ರಾಪಂ ಅಧ್ಯಕ್ಷೆ ಗಂಗಮ್ಮ ರಾಂಪುರ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.2024–25 ನೇ ಸಾಲಿನ ಬಸವ ರಾಷ್ಟ್ರೀಯ ಪ್ರಶಸ್ತಿಯನ್ನು ಧಾರವಾಡದ ಡಾ.ಎಸ್.ಆರ್.ಗುಂಜಾಳ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು.

## ಶೈಕ್ಷಣಿಕ ಸಮೀಕ್ಷೆ ನಡೆಸಿ: ಸಿದ್ದರಾಮಯ್ಯ

ಜೊತೆಯಲ್ಲಿ ಈ ಪ್ರಕ್ರಿಯೆಯನ್ನು ಕೂಡಾ ಕೇಂದ್ರ ಸರ್ಕಾರ ಪೂರ್ಣಗೊಳಿಸಲಿದೆ

ಎಂದು ನಂಬಿದ್ದೇನೆ ಎಂದು ತಿಳಿಸಿದರು.ವೈಜ್ಞಾನಿಕವಾದ ಮೀಸಲಾತಿ ನೀತಿಯನ್ನು ರೂಪಿಸುವುದೇ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮೂಲ ಉದ್ದೇಶವಾಗಿದೆ.

ಪ್ರತಿ ಬಾರಿ ಮೀಸಲಾತಿಗೆ ಸಂಬಂಧಿಸಿದ ಪ್ರಕರಣಗಳು ವಿಚಾರಣೆಗೆ

ಬಂದಾಗೆಲ್ಲ ಸುಪ್ರೀಂ ಕೋರ್ಟ್ ಇಂತಹದ್ದೊಂದು ಸಮೀಕ್ಷೆ ನಡೆಸುವ ಅಗತ್ಯವನ್ನು ಒತ್ತಿಒತ್ತಿ ಹೇಳುತ್ತಾ ಬಂದಿದೆ ಎನ್ನುವುದನ್ನು ಕೇಂದ್ರ ಸರ್ಕಾರ ಗಮನಿಸಬೇಕಾಗುತ್ತದೆ.

ನಾನು ಧರ್ಮಸಿಂಗ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ಶಾಶ್ವತ ಹಿಂದುಳಿದ

ವರ್ಗಗಳ ಆಯೋಗ ರಚಿಸಿ ಜಾತಿಯ ಜೊತೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವ ತೀರ್ಮಾನ ಕೈಗೊಂಡಿದ್ದೆ. ಕಾರಣಾಂತರಗಳಿಂದ ಅನುಷ್ಠಾನಗೊಳ್ಳದೆ ನೆನೆಗುದಿಗೆ ಬಿದ್ದ

ಆ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಮತ್ತೆ ನಾನು ರಾಜ್ಯದ ಮುಖ್ಯಮಂತ್ರಿ ಆಗಬೇಕಾಯಿತು ಎಂದು ನುಡಿದರು.ಜಾತಿ ಗಣತಿ ಜೊತೆಯಲ್ಲಿ ಮೀಸಲಾತಿ ಮಿತಿ ಏರಿಕೆಯ ನಿರ್ಧಾರವನ್ನು

ಸಂಪೂರ್ಣ ಬೆಂಬಲಿಸಿ ಅದನ್ನು ನಮ್ಮ ಪಕ್ಷದ ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ರೂಪಿಸಿ ದೇಶಾದ್ಯಂತ ಪ್ರಚಾರ ಮಾಡುತ್ತಾ ಬಂದ ಕಾಂಗ್ರೆಸ್ ಪಕ್ಷದ ನಾಯಕರಾದ ರಾಹುಲ್ ಗಾಂಧಿಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಅವರ ಅವಿರತ ಪ್ರಯತ್ನದ ಒತ್ತಡದಿಂದಾಗಿಯೇ ಇಂದು ಪ್ರಧಾನಿ ನರೇಂದ್ರ ಮೋದಿಯವರು ಜಾತಿ ಗಣತಿ ನಡೆಸುವ ನಿರ್ಧಾರವನ್ನು ಕೈಗೊಂಡಿದ್ದಾರೆ ಎನ್ನುವುದನ್ನು ಅವರು ಒಪ್ಪಿಕೊಳ್ಳದೇ ಇರಬಹುದು, ಆದರೆ ದೇಶ ಖಂಡಿತಾ ಒಪ್ಪುತ್ತದೆ ಎಂದು ಹೇಳಿದರು. ಜಾತಿ ಗಣತಿ ಟೀಕಿಸಿದ್ದ ಬಿಜೆಪಿ ಈಗ ಒಪ್ಪಿಕೊಂಡಿದೆ:ಜಾತಿ ಗಣತಿ ನಡೆಸುವುದರಿಂದ ಜಾತಿ ಸಂಘರ್ಷಗಳು ಹೆಚ್ಚಾಗಿ ಸಮಾಜ ಒಡೆದುಹೋಗುತ್ತದೆ, ಜಾತಿ ಗಣತಿ ಎನ್ನುವುದು ಹಿಂದೂ ಸಮಾಜವನ್ನು ಒಡೆಯುವ ಹುನ್ನಾರ ಎಂದೆಲ್ಲ ವರ್ಷಗಳ ಕಾಲ ಟೀಕಾಪ್ರಹಾರ ಮಾಡುತ್ತಾ ಬಂದ ಭಾರತೀಯ ಜನತಾ ಪಕ್ಷ ಮತ್ತು ಅದರ ನೇತೃತ್ವದ ಸರ್ಕಾರಗಳು ಕೊನೆಗೂ ಜಾತಿ

ಗಣತಿಯ ಸಾಮಾಜಿಕ ಮಹತ್ವವನ್ನು ಅರ್ಥಮಾಡಿಕೊಂಡಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದರು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಎನ್ನುವುದು ವಾಸ್ತವ.

ಜಾತಿ ಇಲ್ಲ ಎನ್ನುವುದು ಆತ್ಮವಂಚನೆ. ಜಾತಿ ಎನ್ನುವ

ವಾಸ್ತವವನ್ನು ಒಪ್ಪಿಕೊಳ್ಳುವ ಮೂಲಕವೇ ಅದರ ನಾಶಕ್ಕೆ ಪ್ರಯತ್ನಿಸಬೇಕಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವ ಮೂಲಕವೇ ಜಾತಿನಾಶ ಸಾಧ್ಯ ಎಂದು ನಾನು ಬಲವಾಗಿ ನಂಬಿದವನು ಎಂದು

ಹೇಳಿದರು. ಕರ್ನಾಟಕದಲ್ಲಿ ನಾವು ನಡೆಸಿದ್ದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಸಿದ್ಧ ಇದೆ. ಇದನ್ನು ಬಿಜೆಪಿಯ ರಾಜ್ಯ ಘಟಕ ನಾನಾ ಸಬೂಬುಗಳನ್ನು ಮುಂದೊಡ್ಡಿ ವಿರೋಧಿಸುತ್ತಿದೆ.

ಈ ಸಮೀಕ್ಷೆಯನ್ನು ಆಧಾರವಾಗಿಟ್ಟುಕೊಂಡು ಮೀಸಲಾತಿಯನ್ನು ಪರಿಷ್ಕರಿಸಿ ಈಗಿನ ಶೇಕಡಾ 50ರ ಮಿತಿಯನ್ನು ಹೆಚ್ಚಿಸುವ

ಪ್ರಯತ್ನ ಕೂಡಾ ನಡೆದಿದೆ. ಈ ಎಲ್ಲಾ ಪ್ರಯತ್ನಗಳಿಗೆ ಅಡ್ಡಗಾಲು ಹಾಕುತ್ತಿರುವ ಬಿಜೆಪಿಯ ರಾಜ್ಯಘಟಕದ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಿವಿ ಹಿಂಡಿ ಬುದ್ಧಿ ಹೇಳಬೇಕೆಂದು ಮನವಿ ಮಾಡಿದರು.

ನಮ್ಮ ಪಕ್ಷದ ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಲೇ ಕೊನೆಗೆ ಅದನ್ನು ತಮ್ಮ ಪಕ್ಷದ ಕಾರ್ಯಕ್ರಮವನ್ನಾಗಿ ಮಾಡಿಕೊಂಡ ರೀತಿಯಲ್ಲಿಯೇ ಇದೀಗ ನಮ್ಮ ಜಾತಿಗಣತಿ ಕಾರ್ಯಕ್ರಮವನ್ನು ಕೂಡಾ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಕೈಗೆತ್ತಿಕೊಂಡಿರುವುದು

ಕಾಂಗ್ರೆಸ್ ಪಕ್ಷದ ನೀತಿ ಮತ್ತು ಕಾರ್ಯಕ್ರಮಗಳು

ಜನಪರವಾಗಿರುವುದಕ್ಕೆ ಸಾಕ್ಷಿಯಾಗಿದೆ. ಕರ್ನಾಟಕ ಸರ್ಕಾರ ನಡೆಸಿರುವ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಒಂದು ಪರಿಪೂರ್ಣ ಮಾದರಿಯಾಗಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ

ಯಾವುದೇ ಸಲಹೆ–ಸಹಕಾರ ನೀಡಲು ರಾಜ್ಯ ಸರ್ಕಾರ ಸಿದ್ಧ ಇದೆ ಎಂದು ತಿಳಿಸಿದರು.

## ವಚನಕಾರರ ಕೊಡುಗೆ ಅನನ್ಯ

ಪಟ್ಟಣದ ಮಾಣಿಕ ಪ್ರಭು ಪತ್ತಿನ ಸೌಹಾರ್ದ ಸಹಕಾರಿ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.12ನೇ ಶತಮಾನದ ಬಸವಣ್ಣನವರ ಕಾಲದಲ್ಲಿ ವಚನಕಾರರಾಗಿ ಹೊರಹೊಮ್ಮಿದ ಬಹುತೇಕ ಶರಣರು ವಚನಗಳ ಮೂಲಕ ಕಾಯಕಕ್ಕೆ ಹೆಚ್ಚು ಆದ್ಯತೆ ನೀಡಿ ನೇರ ನಡೆ,ನುಡಿ ಮೂಲಕ ಸಮಾಜದ ಕಂದಾಚಾರ, ಅನಿಷ್ಟ ತೊಡೆದು ಹಾಕುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಬಣ್ಣಿಸಿದರು.ಮಾಣಿಕ ಪ್ರಭು ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷ ರಮೇಶ ರೆಡ್ಡಿ ಮಾತನಾಡಿ, ನಾಡು,

ಸಂಸ್ಕೃತಿ ಉಳಿವಿಗಾಗಿ ಶರಣರು, ಸರ್ವ ಜನಾಂಗದ ಮಹಾನ್ ಪುರುಷರು ವಚನಗಳ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ. ಸಂವಿಧಾನ, ಕಾನೂನು ಕಟ್ಟುಪಾಡುಗಳು ಇಲ್ಲದಿರುವ ಕಾಲದಲ್ಲಿ ಬದುಕಿನಲ್ಲಿ ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿ ಅಳವಡಿಸಿಕೊಂಡು ಹೇಗೆ ಬದುಕು

ಹೇಗೆ ನಿರ್ವಹಣೆ ಮಾಡಬೇಕು ಎನ್ನುವ ವಿಚಾರ ಮುಂದಿಟ್ಟಿಕೊಂಡು ವಚನಗಳ ಮೂಲಕ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ ಎಂದರು.ಈ ಸಂದರ್ಭದಲ್ಲಿ ಮೋಹನರೆಡ್ಡಿ, ರಾಮರೆಡ್ಡಿ, ಜೈಕಾಂತ ರೆಡ್ಡಿ, ನಾಮದೇವ ಸೂರ್ಯವಂಸಿ, ವಿಜಯಲಕ್ಷ್ಮಿ, ಸೀಫಾ, ಮಹ್ಮದ್ ಸೇರಿ ಅನೇಕರಿದ್ದರು.

## ಭೀಮ್ ಆರ್ಮಿ ಸಂಘಟನೆಗೆ ಶ್ರೀಕಾಂತ ಅಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಭೀಮ್ ಆರ್ಮಿ ಸಂಘಟನೆ ತಾಲೂಕ ಅಧ್ಯಕ್ಷ ಮನೋಜಕುಮಾರ ಜಾನವೀರ ನೇತೃತ್ವದಲ್ಲಿ ಭೀಮ್ ಆರ್ಮಿ ಸಂಘಟನೆ ಬೇನಚಿಂಚೋಳಿ ಗ್ರಾಮ ಶಾಖೆಯ ನೂತನ ಅಧ್ಯಕ್ಷರಾಗಿ ಶ್ರೀಕಾಂತ ಭಂಡಾರಿಗೆ ಆಯ್ಕೆ ಮಾಡಲಾಯಿತು.ಬಳಿಕ ಸಂಘಟನೆ ತಾಲೂಕ ಅಧ್ಯಕ್ಷ ಮನೋಜಕುಮಾರ ಜಾನವೀರ ಮಾತನಾಡಿ,ಗ್ರಾಮೀಣ ಭಾಗದಲ್ಲಿ ಸಂಘಟನೆ ಕಾರ್ಯಗಳು ಚುರುಕಾಗಿ ನಡೆಯುವಂತೆ ಗ್ರಾಮ ಶಾಖೆ ಪದಾಧಿಕಾರಿಗಳು ನೋಡಿಕೊಳ್ಳಬೇಕು. ಜತೆಗೆ ಅನ್ಯಾಯಕ್ಕೆ ಒಳಗಾದ ಜನರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಈ ವೇಳೆ ದಯಾನಂದ ಘಂಟೆ, ಜೈಭೀಮ ಪ್ರಸಾದ, ಆಕಾಶ ರೈ, ಕಿಟ್ಟಿ ದಿಗಡೆ, ಕಿರಣ ಗುಬ್ಬಿ, ಆಕಾಶ ದೊಡ್ಡಿ ಸೇರಿ ಅನೇಕರಿದ್ದರು.

## ವಿಶ್ವಗುರು ಬಸವಣ್ಣನವರ 892ನೇ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಏ.30:ವಿಶ್ವಗುರು ಬಸವಣ್ಣ ಅವರು 12ನೇ ಶತಮಾನದಲ್ಲಿಯೇ ಸಮಾನತೆಯ ಹಾಗೂ ಜಾತಿರಹಿತ ಸಮ ಸಮಾಜ ನಿರ್ಮಾಣಕ್ಕಾಗಿ ಪ್ರಯತ್ನಿಸಿದ್ದರು.ಅವರ ಅನುಭವ ಮಂಟಪ ಪರಿಕಲ್ಪನೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಗೊಂಡಿತ್ತು ಎಂದು ತಹಸೀಲ್ದಾರ್ ಅಮಿತಕುಮಾರ ಕುಲಕರ್ಣಿ ಹೇಳಿದರು.

ಪಟ್ಟಣದ ತಹಸಿಲ್ ಕಚೇರಿ ಆವರಣದಲ್ಲಿ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ಬಸವಣ್ಣನವರ 892ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಾತಿಯಿಂದ ಮನುಷ್ಯನನ್ನು ಮೇಲು–ಕೀಳು ಎಂದು ನೋಡುವ ಅಸ್ಪೃಶ್ಯತೆ ಉತ್ತುಂಗದಲ್ಲಿದ್ದ 12ನೇ ಶತಮಾನದಲ್ಲಿಯೇ, ಕರ್ನಾಟಕದಲ್ಲೊಂದು ವಚನ ಕ್ರಾಂತಿಯ ಮೂಲಕ ಸಮಾನತೆ ಸಾರಿದ ಬಸವಣ್ಣ, ಜಗತ್ತು ಕಂಡ ಅಪರೂಪದ ವ್ಯಕ್ತಿ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಶಿವಕುಮಾರ ಝುಲ್ಪೆ, ಪ್ರೊ.ಎಸ್.ಎನ್.ಶಿವಣಕರ, ಚಂದ್ರಕಾಂತ ಸಂಗಮೆ, ಅವಿನಾಶ ಶಿವಣಕರ, ಸಂತೋಷ ಸೊಲ್ಲಾಪುರೆ, ಅಜೀತ್ ರಾಗಾ, ಹಾವಗಿರಾವ ಟೊಣ್ಣೆ, ಅಮರ ಶಿವಣಕರ, ಉಮಾಕಾಂತ ಮಹಾಜನ, ಚಂದ್ರಕಾಂತ ಭೈರೆ, ಶಿವಕುಮಾರ ಪಾಟೀಲ್, ಸಂತೋಷ ಸುಲಾಕೆ, ಸೂರ್ಯಕಾಂತ ಶಿವಣಕರ, ಗುರು ಶಿವಣಕರ, ಪ್ರವೀಣ ಪಾಟೀಲ್, ಶಿವಾನಂದ ವಡ್ಡೆ, ಲಿಂಗಾದ ಮಹಾಜನ್, ನಾಗೇಶ ಪತ್ರೆ, ಶಿವಶರಣಪ್ಪ ಚಿಕಮುರ್ಗೆ, ಪಪ್ಪು ಬಿರಾದಾರ, ಅನೀಲ ಬಿರಾದಾರ, ಮಹಾದೇವ ಬಿರಾದಾರ ಇತರರಿದ್ದರು.

ಬೃಹತ್ ಬೈಕ್ ರ್‍ಯಾಲಿ :

ವಿಶ್ವಗುರು ಬಸವಣ್ಣನವರ ಜಯಂತಿ ಪ್ರಯುಕ್ತ ಪಟ್ಟಣದಲ್ಲಿ ಬೃಹತ್ ಬೈಕ್ ರ್‍ಯಾಲಿ ನಡೆಯಿತು. ಪಟ್ಟಣದ ಬಸವೇಶ್ವರ ಮಂದಿರದಿಂದ ಆರಂಭವಾದ ಮೆರವಣಿಗೆಯು ಬಸವೇಶ್ವರ ವೃತ್ತ, ಟಿಪ್ಪು ಸುಲ್ತಾನ ವೃತ್ತ, ಹನುಮಾನ ಮಂದಿರ, ಅಲ್ಲಮಪ್ರಭು ವೃತ್ತದಿಂದ ಸಾಗಿ ಪ್ರವಾಸಿ ಮಂದಿರ, ಶಿವಾಜಿ ವೃತ್ತ, ಅಕ್ಕಮಹಾದೇವಿ ವೃತ್ತದಿಂದ ಬಸವೇಶ್ವರ

ಮಂದಿರಕ್ಕೆ ಬಂದು ಕೊನೆಗೊಂಡಿತು. ರ್‍ಯಾಲಿಯುದ್ದಕ್ಕೂ ವಿಶ್ವಗುರು ಬಸವಣ್ಣನಿಗೆ ಜಯವಾಗಲಿ ಎಂಬ ಘೋಷಣೆ ಕೂಗಲಾಯಿತು. ಬೈಕ್ ರ್‍ಯಾಲಿಯಲ್ಲಿ ವಿವಿಧ ಸಮಾಜದ ಯುವಕರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

## ಫಸಲ್ ಬೀಮಾ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ರಾಷ್ಟ್ರಮಟ್ಟದ ಪ್ರಶಸ್ತಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಏ.30: 2023–24ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿತು.

ಏಪ್ರೀಲ್ 18 & 19 ರಂದು ಕೇರಳದಲ್ಲಿ ನಡೆದ 12th National Review Confiranceand8th nationalLevelMoni-toring Committee Meetinಂ ನಲ್ಲಿ ಭಾರತ ಸರ್ಕಾರದ ಕೃಷಿ ಮತ್ತು ಕಲ್ಯಾಣ ಸಚಿವಾಲಯದ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಅವರಿಂದ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹಾಗೂ ಜಂಟಿ ಕೃಷಿ ನಿರ್ದೇಶಕ ಟಿ.ಎಸ್ ರುದ್ರೇಶಪ್ಪ ಅವರು ಈ ಪ್ರಶಸ್ತಿಯನ್ನು ಪಡೆದು–ಕೊಂಡರು.

2023–24ನೇ ಸಾಲಿನ ಮುಂಗಾರು & ಹಿಂಗಾರು ಹಂಗಾಮಿನಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ನಿರಂತರ ಮೇಲ್ವಿಚಾರಣೆ, ವಿಮರ್ಶೆ ಹಾಗೂ ಮಾರ್ಗದರ್ಶನದ ಫಲಿತಾಂಶವಾಗಿ, ಕೊಪ್ಪಳ ಜಿಲ್ಲಾಡಳಿತ ಹಾಗೂ ಕೃಷಿ ಇಲಾಖೆ ಉತ್ತಮ ಸಾಧನೆ ಮಾಡಿರುವುದರಿಂದ ಈ ಪ್ರಶಸ್ತಿ ದೊರೆಯಲು ಕಾರಣವಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್ ರುದ್ರೇಶಪ್ಪ ಅವರು ತಿಳಿಸಿದ್ದಾರೆ.

## ದೇಶಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಭಾರತ ದೇಶಕ್ಕೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಕೊಡುಗೆ ಅಪಾರವಾಗಿದೆ ಎಂದು ನ್ಯಾಯವಾದಿ ಸತೀಷ ರಾಂಪೂರೆ ಹೇಳಿದರು.ತಾಲೂಕಿನ ಓತಗಿ ಗ್ರಾಮದ ಅಂಬೇಡ್ಕರ್ ವೃತ್ತದಲ್ಲಿ ಮಹಾನಾಯಕ ನವ ಯುವಕರ ಸಂಘದ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಅಂಬೇಡ್ಕರ್ ಅವರ ನಿಸ್ವಾರ್ಥ ಜೀವನ ಹಾಗೂ ಹೋರಾಟದ ಫಲವಾಗಿ ಪ್ರಸ್ತುತ ಸಮಾಜದಲ್ಲಿ ನಾವೆಲ್ಲರೂ ಸ್ವಾತಂತ್ರ್ಯವಾಗಿ ಜೀವನ ಸಾಗಿಸುತ್ತಿದ್ದೇವೆ. ಹೀಗಾಗಿ ಇಂದಿನ ಯುವ ಪೀಳಿಗೆಗಳು ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಜಯಂತಿ ನಿಮಿತ್ತ ಆಯೋಜಿಸಿದ್ದ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ಅರ್ಜುನ್ ಮೇತ್ರೆ, ಮಹೇಶ ಮೇಘಾ, ಅಶೋಕ ವರ್ಮಾ, ದಸ್ತಗೀರ್ ಪಟೇಲ್, ರಾಹುಲ್, ಭೀಮರಾವ, ಸಲೀಂಸಾಬ್, ತುಕಾರಾಮ್, ಪರಮೇಶ್ವರ ರತ್ನಾಕರ್, ದೀಲಿಪ, ಮಚೇಂದ್ರ, ಸ್ವೇತಾ ರತ್ನಾಕರ್, ಜಗನ್ನಾಥ ರತ್ನಾಕರ್, ನಂದಕುಮಾರ, ಮಹಾಲಿಂಗ, ಕೃಷ್ಣಪ್ಪ, ಈಶ್ವರ, ಪರಮೇಶ್ವರ, ಲಖನ್, ಝುರನಪ್ಪ, ಅರುಣ, ಮಚೇಂದ್ರ, ಪ್ರಮೋದ, ಅಮರ, ಬಸವಂತ, ಕುಪೇಂದ್ರ ಸೇರಿ ಅನೇಕರಿದ್ದರು.

## ಕುರುಡರು ಆನೆ ಮುಟ್ಟಿದಂತಿವೆ ಬಸವಣ್ಣನವರ ವಚನಗಳು: ಡಾ. ಬಸವರಾಜ ಬಲ್ಲೂರ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಏ. 30 : ಬಸವಣ್ಣನವರ ವಚನಗಳು ಕುರುಡರು ಆನೆ ಮುಟ್ಟಿ ಅಂದಾಜಿಸಿದಂತಿವೆ ಎಂದು ಕರ್ನಾಟಕ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಬಸವರಾಜ ಬಲ್ಲೂರ ನುಡಿದರು. ಆರ್ ಆರ್ ಕೆ ಪದವಿ ಕಾಲೇಜು ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಮಾಧವನಗರದ ಆರ್‌ಆರ್‌ಕೆ ಪದವಿ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಬಸವಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು. ಇಂದಿಗೂ ಅವುಗಳ ಆಳ ಅಧ್ಯಯನ, ಅರ್ಥ ವಿವರಣೆಗೆ ನಿಲುಕದಂತಿವೆ. ಅಂದು ಚಾಲನೆಯಲ್ಲಿದ್ದ ರಾಜಸತ್ತೆಯನ್ನು ಬದಿಗೊತ್ತಿ ಮೊದಲಬಾರಿಗೆ ಪ್ರಜಾಸತ್ತೆಯನ್ನು ಮುನ್ನೆಲೆಗೆ ತಂದರು. ಈ ಕಾರಣಕ್ಕಾಗಿಯೇ ಕೆಳವರ್ಗದ ಮಹಿಳೆಯರೂ ವಚನರಚನೆಯಲ್ಲಿ ತೊಡಗಿಸಿಕೊಳ್ಳಲು, ಆಯ್ದಕ್ಕಿ ಲಕ್ಕಮ್ಮನಂಥವರು ಅಂದೇ ಭ್ರಷ್ಟಾಚಾರದ ನಿರ್ಮೂಲನೆಗೆ ಅಂತಃಶಕ್ತಿಯನ್ನು ತಂದುಕೊಳ್ಳಲು ಸಾಧ್ಯವಾಯಿತು. ಅಂತಹ ಶಕ್ತಿ ತುಂಬಿದವರೇ ಬಸವಣ್ಣನವರು ಎಂದು ಹೇಳಿದರು. ತನ್ನ ಸಂಬಂಧಗಳನ್ನು ತಳ ಸಮುದಾಯದವರೊಂದಿಗೆ ಅಪವರ್ಗೀಕರಣಗೊಳಿಸಿಕೊಳ್ಳುತ್ತಾರೆ. ತನ್ನ ಹುಟ್ಟನ್ನೇ ನಿರಾಕರಿಸುತ್ತ, ಕೆಳವರ್ಗಕ್ಕೆ ಸೇರಿಸಿಕೊಳ್ಳುವ ಶಕ್ತಿ ಅವರಲ್ಲಿತ್ತು. ತನ್ನ ಜೀವನದುದ್ದಕ್ಕೂ ಉತ್ತಮ ಮನುಷ್ಯರ ಉತ್ತಮ ಸಮಾಜದಲ್ಲಿ ಜಾತಿ,ಮತ,ವರ್ಗ,ವರ್ಣಗಳ ಭೇದಗಳಿರಬಾರದೆಂದು ನುಡಿದರು ಎಂದು ತಿಳಿಸಿದರು. ಬಸವ ಜಯಂತಿಯ ಆಚರಣೆ ಮಾಡುವುದು ಅಂದರೆ ನಮ್ಮ ಆತ್ಮಾವಲೋಕನ ಮಾಡಿಕೊಳ್ಳುವುದು ಎಂದರ್ಥ.ಬಸವಜಯಂತಿಯ ಉತ್ಸವ ಅಂದರೆ ದೀನದಲಿತರ, ಕಾಯಕ ಜೀವಿಗಳ, ಜನಪರ, ಜೀವಪರ ಜಗತ್ತಿನ ಉತ್ಸವವೇ ಆಗಿದೆ ಎಂದು ನುಡಿದರು.

ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ನಾಗಭೂಷಣ ಕಮಠಾಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ,900 ನೂರು ವರ್ಷಗಳ ಹಿಂದೆಯೇ ಬಸವಣ್ಣನವರು ಅನುಭವ ಮಂಟಪವೆಂಬ ಪಾರ್ಲಿಮೆಂಟ್ ನಮಗೆ ಕೊಟ್ಟಿದ್ದಾರೆ. ಅಲ್ಲಿ ಎಲ್ಲರಿಗೂ ಸೂಕ್ತ ಸ್ಥಾನಮಾನ ನೀಡಲಾಗಿತ್ತು. ಶಿಕ್ಷಣದ ವಿಷಯದಲ್ಲಿ ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಅರ್ಥಪೂರ್ಣವಾಗಿ ನಿಭಾಯಿಸಬೇಕೆಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್‌ಆರ್‌ಕೆ ಶಿಕ್ಷಣ ಸಮಿತಿಯ ಅಧ್ಯಕ್ಷ ಪ್ರಫುಲ್ ಪಾಂಡೆ ವಹಿಸಿದ್ದರು. ಶರಣಪ್ಪ ದೇಶಮುಖ, ಧನರಾಜ ತಾಂಡೂರೆ, ಶ್ರೀಕಾಂತ ಪಾಟೀಲ, ಮನೋಜಕುಮಾರ ಕುಲಕರ್ಣಿ, ಗುರುನಾಥ ಅಕ್ಕಣ್ಣನವರು ಮುಖ್ಯ ಅತಿಥಿಗಳಾಗಿದ್ದರು. ತಾಲ್ಲೂಕು ಕಸಾಪ ಅಧ್ಯಕ್ಷ ಟಿ.ಎಂ.ಮಚ್ಚೆ ಅವರು ಪರಿಷತ್ತಿನ ಕಾರ್ಯಚಟುವಟಿಕೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಬಂಡಯ್ಯ ಸ್ವಾಮಿ ಸ್ವಾಗತಿಸಿದರು. ತಾಲ್ಲೂಕು ಕಸಾಪದ ಉಪಾಧ್ಯಕ್ಷ ಪೇರ್ ಜಗನ್ನಾಥ್ ಕಮಲಾಪುರೆ ನಿರೂಪಿಸಿದರು. ಗೌರವ ಕಾರ್ಯದರ್ಶಿ ಉಮೇಶ ಜಾಬಾ ವಂದಿಸಿದರು.



ಔರಾದ್: ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ಬಸವ ಮಂಟಪದಲ್ಲಿ 892ನೇ ಸಂಸ್ಕೃತಿಕ ನಾಯಕ ವಿಶ್ವಗುರು ಬಸವೇಶ್ವರ ಜಯಂತಿ ಆಚರಿಸಲಾಯಿತು ಬಸವಣ್ಣೆಪ್ಪ ದೋಣ್ಣಾಗಾವೇ. ಶಿವರಾಜ್. ಮೆಂಗಾ.ಬಾಲರಾಜ ಪಾಟೀಲ. ಅಭಿಷೇಕ್ ಪಾಟೀಲ್. ಅವಿನಾಶ್ ಬಿರಾದಾರ್. ಚನ್ನ ಬಸವ ಹುಗ್ಗೆ. ಬಸವರಾಜ್ ಬಿರಾದಾರ್.ವಿಶಾಲ ಶಿರಜೆ. ಸಾಗರ್. ಗಣಪತಿ ಗೋಧಮಗಾವ್. ಇದರು

## ಇಂದು ವಿಧಾನಸಭಾ ಸಭಾಧ್ಯಕ್ಷರಾದ ಯು.ಟಿ.ಖಾದರ್ ಬೀದರಗೆ

ಮಲ್ಲಮ್ಮ ನುಡಿ ವಾರ್ತೆ

ಬೀದರ ಏ.30: ಕರ್ನಾಟಕ ವಿಧಾನಸಭಾ ಸಭಾಧ್ಯಕ್ಷರಾದ ಯು.ಟಿ.ಖಾದರು ಅವರು ಮೇ.1 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅವರು ಮೇ.1 ರಂದು ಬೆಳಿಗ್ಗೆ 9.30 ಗಂಟೆಗೆ ಬೀದರ ಯುವ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷರಾದ ಶಾ ಫರೀದ–ಉಲ್ಲಾ–ಖಾನ ಅವರ ಮನೆಗೆ ಭೇಟಿ ನೀಡಲಿದ್ದಾರೆ. ನಂತರ 10 ಗಂಟೆಗೆ ಬೀದರನ ಸಪ್ನಾ ಹಾಲ್ ಏರಪೋರ್ಟ ರಸ್ತೆ ಬೀದರದಲ್ಲಿ ಹಮ್ಮಿಕೊಂಡಿರುವ ಇಂಗ್ಲೀಷ್ ಹೌಸ್ ಅಕಾಡೆಮಿಯ ಒಂದು ತಿಂಗಳ ವ್ಯಕ್ತಿತ್ವ ವಿಕಾಸನ ಕಾರ್ಯಾಗಾರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಭವ್ಯ ರೀತಿಯಿಂದ ನಡೆದ ಶ್ರೀ ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆ.





(ವರದಿ.ಡಿ.ಕೆ. ಪ್ರಹ್ಲಾದ)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಏ 30 ಬಸವಾದಿ ಶಿವಶರಣರ ನಾಡಿನಲ್ಲಿ ವಿಶ್ವಗುರು ಬಸವಣ್ಣನವರ ಕಾಯಕ ಭೂಮಿಯಲ್ಲಿ ಮಹಾತ್ಮ ಬಸವೇಶ್ವರರ 75 ನೇ ಜಾತ್ರಾ ಅಮೃತ ಮಹೋತ್ಸವ ನಿಮಿತ್ತವಾಗಿ ಬುಧವಾರದಂದು ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬಸವಣ್ಣನವರ ಮೂರ್ತಿಗೆ ಅಷ್ಟಗಂಧ ಪೂಜೆ ನಂತರ ಅಕ್ಕನ ಬಳಗದಿಂದ ವಚನ ಪಠಣ ನಂತರ ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆ ಚಾಲನೆಯನ್ನು ಶಾಸಕರಾದ ಶರಣು ಸಲಗರ್ ನೇರೆವೆರಿಸಿದ್ದರೆ ಬೆಳ್ಳಿ ತೊಟ್ಟಿಲು ಪೂಜೆ ಯನ್ನು ವಿಜಯಪುರದ ಬಾಲಗಾಂವದ ಪೂಜ್ಯ ಶ್ರೀ ಅಮೃತಾನಂದ ಸ್ವಾಮೀಜಿಗಳಿಂದ ನೇರೆವೆರಿತ್ತು. ನಂತರ ಭವ್ಯವಾದ ಮೆರವಣಿಗೆ ಯನ್ನು ದೇವಸ್ಥಾನದಿಂದ ಕೋಟೆ ಮುಖಾಂತರ ಗಾಂಧಿ ಚೌಕ. ಬಸವೇಶ್ವರ ಚೌಕ.ಡಾ.ಬಾಬಾಸಾಹೇಬ್ ಅಂಬೇಡ್ಕರ್ ಚೌಕ ಮುಖಾಂತರ ಶಿವಶರಣ ಹರಳಯ್ಯ ಚೌಕಿನವರೆಗೆ ತಲುಪಿ ಮರಳಿ ದೇವಸ್ಥಾನಕ್ಕೆ ತಲುಪಿತು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು. ವಾದ್ಯಗಳು. ಕೋಲಾಟ. ವಿಧ್ಯಾರ್ಥಿಗಳಿಂದ ವಚನದಗಾಯನಕ್ಕೆ ನೃತ್ಯ ಮಾಡಿದರು. ಆನೆಯ ಮೇಲೆ ವಿಶ್ವಗುರು ಬಸವಣ್ಣನವರ ಮೂರ್ತಿ ರಾರಾಜಿಸುತ್ತಿತು. ವಿಧ್ಯಾರ್ಥಿಗಳು ಬಸವಾದಿ ಶಿವಶರಣರ ವೇಷ ಧರಿಸಿದರೆ ಕುದರೆ ಮೇಲೆ ಬಸವಣ್ಣನವರ. ಅಕ್ಕಮಹಾದೇವಿಯ ವೇಷ ಧಾರಿಗಳು ಗಮನಸೆಳೆದರು. ಅನೇಕ ಭಕ್ತಾದಿಗಳಿಂದ ಬಸವಣ್ಣನವರ ಬೆಳ್ಳಿ ತೊಟ್ಟಿಲು ಪೂಜ್ಯ ಸಲ್ಲಿಸುತ್ತಿದರು. ವಚನ ಪಿತಾಮಹ ಡಾ. ಪ. ಗು. ಹಳಕಟ್ಟಿ ಯವರ ಹಾಗೂ ಜಾತ್ರಾ ಸಂಸ್ಥಾಪಕರಾದ ದಿ. ಬಾಬ ಸಾಹೇಬ್ ವಾರದ ಮಲ್ಲಪ್ಪನವರ ಭಾವಚಿತ್ರಗಳು ಸಹ ಮೆರವಣಿಗೆ ಶೋಭೆ ತಂದುಕೊಟ್ಟವು. ಮೆರವಣಿಗೆಯಲ್ಲಿ ಸಚಿವರಾದ ಈಶ್ವರ ಖಂಡ್ರೆ. ಶಾಸಕರಾದ ಶರಣು ಸಲಗರ್. ಮಾಜಿ ಶಾಸಕರಾದ ಮಲ್ಲಿಕಾರ್ಜುನ ಎಸ್ ಖೂಬಾ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಹುಲಸೂರಿನ ಪೂಜ್ಯ ಶ್ರೀ ಡಾ ಶಿವಾನಂದ ಮಹಾಸ್ವಾಮಿಜಿ. ತಡೂಳಾದ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು. ಇನ್ನಿತರರ ಪೂಜ್ಯರು. ಬಸವೇಶ್ವರ ದೇವಸ್ಥಾನದ ಪಂಚ ಕಮಿಟಿ ಅಧ್ಯಕ್ಷರಾದ ಬಸವರಾಜ ಕೊರಕೆ. ಹಾಗೂ ಪದಾಧಿಕಾರಿಗಳು. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಹಾಗೂ ಪದಾಧಿಕಾರಿಗಳು. ಪ್ರಮುಖರಾದ ಪ್ರದೀಪ ವಾತಡೆ. ಅರ್ಜುನ ಕನಕ ಮನೋಹರ ಮೈಸೆ. ಶರಣು ಅಲಗೂಡ. ರವಿ ಕೊಳಕೂರ. ಶಿವಕುಮಾರ್ ಬಿರಾದಾರ. ಬಸವರಾಜ ಬಾಲಕಿಲೆ. ಶರಣು ದುರ್ಗೆ ಸೇರಿದಂತೆ ಯುವಕರು. ವಿವಿಧ ಸಂಘಟನೆಯ ಪ್ರಮುಖರು ಶರಣು ಶರಣೆಯರು. ಸಂಸ್ಥೆಯ ಸಿಬ್ಬಂದಿ ವರ್ಗದವರು ಸೇರಿದಂತೆ ಅನೇಕರು ಭಾಗವಹಿಸಿದ್ದರು. ಬಂದಂತಹ ಭಕ್ತಾದಿಗಳಿಗೆ ವಿವಿಧ ಸಂಘಟನೆಗಳಿಂದ ಅನ್ನ ದಾಸೋಹ. ತಂಪಾದ ನೀರು ಮಜ್ಜಿಗೆ ವೆವಸ್ಥೆ ಮಾಡಿದರು.



ಬಸವಕಲ್ಯಾಣ :– ಮಹಾತ್ಮ ಬಸವೇಶ್ವರರ 75 ನೇ ಜಾತ್ರಾ ಅಮೃತ ಮಹೋತ್ಸವ ನಿಮಿತ್ತವಾಗಿ ಬುಧವಾರದಂದು ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆಯು ಬಸವೇಶ್ವರ ವೃತ್ತಕ್ಕೆ ಆಗಮಿಸಿದಾಗ ಸಚಿವರಾದ ಈಶ್ವರ ಖಂಡ್ರೆ ಯವರು ವಿಶ್ವಗುರು ಬಸವಣ್ಣನವರ ಮೂರ್ತಿಗೆ ಹೂಮಾಲೆ ಸಲ್ಲಿಸಿದರು. ಶಾಸಕರಾದ ಶರಣು ಸಲಗರ್. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಮಾಜಿ ಶಾಸಕರಾದ ಮಲ್ಲಿಕಾರ್ಜುನ. ಎಸ್ ಖೂಬಾ. ಹಾಗೂ ಗಿರೀಶ್ ತಾಂಬೋಳೆ. ಸಂದೀಪ್ ಬುಯೆ . ಸುನೀಲ ಪಾಟೀಲ. ಶಿವರಾಜ ನರಶೆಟೆ. ನೀಲಕಂಠ ರಾಠೊಡ. ದೇವಸ್ಥಾನದ ಅಧ್ಯಕ್ಷರು. ಪದಾಧಿಕಾರಿಗಳು. ಸೇರಿದಂತೆ ಅನೇಕರು ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)



ಬಸವಕಲ್ಯಾಣ :– ಮಹಾತ್ಮ ಬಸವೇಶ್ವರರ 75 ನೇ ಜಾತ್ರಾ ಅಮೃತ ಮಹೋತ್ಸವ ನಿಮಿತ್ತವಾಗಿ ಬುಧವಾರದಂದು ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆಯಲ್ಲಿ ವಿವಿಧ ವೇಷ ಧಾರಿಗಳು. ಕಲಾವಿದರು ಮುಖವಾಡ ಧರಿಸಿ ಮೆರವಣಿಗೆಗೆ ನೋಡುಗರಿಗೆ ಮನೋರಂಜನೆ ನೀಡುತ್ತಿದ್ದವು. (ಮಲ್ಲಮ್ಮ ನುಡಿ ಚಿತ್ರ)



ಬಸವಕಲ್ಯಾಣ :– ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಹಾಗೂ ವಿಶ್ವಸ್ಥ ಸಮಿತಿಯಿಂದ ಶ್ರೀ ಬಸವೇಶ್ವರರ ದೇವಸ್ಥಾನದ ಜಾತ್ರಾ ಅಮೃತ ಮಹೋತ್ಸವ ಪ್ರಯುಕ್ತ ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನವನ್ನು ವಿದ್ಯುತ್ ಅಲಂಕಾರದಿಂದ ಅನೇಕರ ಜನ ಮನ ಕಂಗೊಳಿಸುತ್ತಿರುವ ದೃಶ್ಯ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

## ಬಸವ ಜಯಂತಿ ಕಾರಣ ಕೇಳಿ ನೋಟಿಸ್

(ರಾಜಕುಮಾರ ಆರ್ ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಸರ್ಕಾರ ಬಸವ ಜಯಂತಿಯನ್ನು ಸಂಸ್ಕೃತಿನಾಯಕರ ದಿನವನ್ನಾಗಿ ಆಚರಿಸಲು ಆದೇಶ ಹೊರಡಿಸಿ ಕಡ್ಡಾಯವಾಗಿ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಆಚರಿಸಲು ಆದೇಶಿಸಿದೆ ಆದರೆ ತಾಲೂಕಿನ ಮಂಗಲಗಿ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು ಹಾಗೂ ಎಲ್ಲಾ ಶಿಕ್ಷಕರು ಬಸವ ಜಯಂತಿಯನ್ನು ನಿಗದಿತ ಸಮಯಕ್ಕೆ ಆಚರಣೆ ಮಾಡದೆ ತಡವಾಗಿ ಆಚರಣೆ ಮಾಡಿದ್ದಾರೆ ಎಂದು ಗ್ರಾಮಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಕರೆ ಮೂಲಕ ದೂರು ಸಲ್ಲಿಸಸಿದರು. ದೂರಿನ ಮೇರೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ತಡವಾಗಿ ಆಚರಿಸಿದ ಫೋ–ಟೋ ಸಹಿತ ವರದಿ ಏಪ್ರಿಲ್ 30ರಂದು ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯಕ್ಕೆ ಸಲ್ಲಿಸಬೇಕು ಒಂದು ವೇಳೆ ನಿರ್ಲಕ್ಷ್ಯ ತೋರಿದರೆ ಕೆ.ಸಿ.ಎಸ್.ಆರ್. ನಿಯಮ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

## ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರ 892ನೇ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ಕರಕನಳ್ಳಿ ಗ್ರಾಮದಲ್ಲಿ ವಿಶ್ವಗುರು ಬಸವಣ್ಣನವರ 892ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತ್ತು. ಸಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಷಟಸ್ಥಲ ಧ್ವಜವನ್ನು ಪ್ರಮುಖರಾದ ಮಲ್ಲಿನಾಥ್ ಕಲ್ಲೂರ್ ಧ್ವಜಾರೋಹಣ ಮಾಡಿ ವಿಶ್ವಗುರು ಬಸವಣ್ಣನವರು ಸಾಮಾಜಿಕ ನ್ಯಾಯದ ಮೇಲೆ ಸರ್ವ ಜನಾಂಗದ ಶಾಂತಿಗೆ ಮತ್ತು ಅಸ್ಪ್ರಶತೆಗೆ ಶ್ರಮಿಸಿದ ಶ್ರಮಿಸಿದ ಮಹಾನ್ ನಾಯಕ ಎಂದು ಬಣ್ಣಿಸಿದರು. ಸಂಗಮೇಶ್ ಹೂಗಾರ್ ಮಾತನಾಡಿ, ಸಂಸ್ಕøತಿಕ ನಾಯಕ ವಿಶ್ವಗುರು ಬಸವಣ್ಣನವರು ಸಮಾಜದ ಕಟ್ಟ ಕಡೆಯ ಜಾತಿಗೂ ವಚನಗಳ ಮೂಲಕ ಸಮಾಜದ ಅಂಕು ಡೊಂಕು ತಿದ್ದುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರುವಲ್ಲಿ 12 ಶತಮಾನದಲ್ಲಿ ಕ್ರಾಂತಿ ಎಬ್ಬಿಸಿದ ಮಹಾನ್ ಸಾಂಸ್ಕøತಿಕ ನಾಯಕ ಎಂದು ಹೇಳಿದರು. ಅವರ ಆದರ್ಶಗಳು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಜನಾಂಗಕ್ಕೆ ಕೊಂಡಯ್ಯಬೇಕೆಂದು ತಿಳಿಸಿದರು. ಪ್ರಮುಖರಾದ ಬಸವರಾಜ ಗಾದಿಗಿ, ಶಿವಪುತ್ರ ಮಾಲಿ ಪಾಟೀಲ್, ಮಲ್ಲಯ್ಯ ಸ್ವಾಮಿ ಆಳಂದಿ, ವೀರಭದ್ರ ಭೈರಿ, ಲ್ಕಸ್ಮಿಕಾಂತರೆಡ್ಡಿ ನಾರಾ, ವೀರಭದ್ರಯ್ಯ ಮಠ, ಬಕ್ಕಯ್ಯ ಸ್ವಾಮಿ, ಪ್ರವೀಣ ಮಲಚಲಮಿ, ರಮೇಶ ವರಪುಲ, ಗಿರಿರಾಜ ಪಾಟೀಲ ಪರಮೇಶ ಮಡಿವಾಳ, ಪ್ರಭು ಘಾಟೋಳ್ಳಿ ರವಿ ಪುಲ್ಲಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಘಟಕ ಆರಂಭ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್: ಏ. 30– ಪಟ್ಟಣದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಶುದ್ಧ ಕುಡಿಯುವ ನೀರಿನ ಘಟಕವನ್ನು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಸಮಾಜ ಸೇವಕ ರಾಗಿರುವ ನರಸಿಮುಲು ಗಂಗಾನೊಳ ಪ್ರಾರಂಭಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ಡಾ.ವಿ.ಸಿ.ಮೈತ್ರಿ ನಿವೃತ್ತ ವೈದ್ಯದೀಕಾರಿಗಳು ಮಾತನಾಡಿ ಕಳೆದ ಐದು ವರ್ಷಗಳಿಂದ ಬೇಸಿಗೆಯಲ್ಲಿ ಜನಗಳ ದಾಹ ತಣಿಸಲು ನೀರಿನ ಅರವಟ್ಟಿಗೆ ನಿರ್ಮಿಸಿ ಜನರ ಸೇವೆ ಮಾಡುತ್ತಿರುವ ನರಸಿಮಲು ಅವರ ಕೆಲಸ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಪ್ರಾರಂಭೋತ್ಸವದಲ್ಲಿ ಗುರುಮಠಕಲ್ ಪುರಸಭೆಯ ಮುಖ್ಯಾಧಿಕಾರಿಗಳಾದ ಶ್ರೀಮತಿ ಭಾರತಿ, ನರಸಿಮಲು ನಿರೇಟಿ, ವಿಜಯಕುಮಾರ್ ನಿರೇಟಿ, ವೆಂಕಟಪ್ಪ ಅವಂಗಪುರ, ನರಸರೆಡ್ಡಿ ಗಡ್ಡೆಸೂಗುರ್, ನಾಗಭೂಷಣ ಅವಂಟಿ, ರಾಮುಲು ಕೋಡಿಗಂಟಿ, ಚನ್ನಪ್ಪ ಕಾಕಲವಾರ್, ಅಶೋಕ್ ಶನಿವಾರಂ ಮತ್ತು ಊರಿನ ಹಿರಿಯ ಮುಖಂಡರು ಭಾಗಿಯಾಗಿ ಶುಭಕೋರಿದರು.

## ಸಂಸ್ಕೃತಿ ನಾಯಕ ಬಸವಣ್ಣನವರ 892ನೇ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಇಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಪುರಸಭೆ ಅಧ್ಯಕ್ಷೆ ರೋಜಮ್ಮಾ ಅವರು ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ 892ನೇ ಬಸವ ಜಯಂತಿಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ಮುಜಾಫರ್ ಪಟೇಲ್, ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ, ಸದಸ್ಯರಾದ ದಿಲೀಪಕುಮಾರ್ ಬಗ್ದಲಕ್ಕರ್, ರಹೇಮಾನ ಪಾಶ, ನಸೀರ ಖಾನ, ವಿಶಾಲ ಬೊರಳೆ, ಮಹ್ಮದ ನಿಸಾರೋದ್ದಿನ್, ಲಕ್ಷ್ಮಿಬಾಯಿ ಗಡಮಿ, ಮಹ್ಮದ ನಸೀರ ಹಕ್ಕೀಂ ಪ್ರಮುಖರಾದ ಅಶೋಕ ಸ್ವಾಮಿ, ಶರಣು ಗಡಮಿ, ವೀರೇಶ ತೂಗಾಂವ್, ಸಚಿನ ಮಠಪತಿ, ಮಂಜುನಾಥ ಸ್ವಾಮಿ ಫಾತ್ಮಪುರ್, ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ರಾಜಶೇಖರ ಉಪ್ಪಿನ, ಸಿಬ್ಬಂದಿಗಳಾದ ಪೂಜಾ ಪಾನಶೆಟ್ಟಿ, ಚಿನದಾಂದ ಪತ್ರಿ, ಸಂತೋಷಬಿರಾದರ, ರವಿಕುಮಾರ ಸ್ವಾಮಿ, ರಾಜಕುಮಾರ ಗುತೆ–ದಾರ್, ನಥಾನಿಯೇಲ್, ಸಚಿನ, ಅಶ್ವಿನಿ, ಮಂಜುಳಾ, ನಾಗೇಂದ್ರ ಬಾಗಿ, ರವಿ ಶಾಖಾ, ಬಕ್ಕಪ್ಪಾ, ಭೀಮಶಾ ಕಾಂಬಳೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸೇಡಂ,ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಸವ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಸೇಡಂ.ಏ.30.ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಗುರು ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತೋತ್ಸವ ಕಾರ್ಯಕ್ರಮ ವನ್ನು ಬಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮುಖಾಂತರ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಕೆ. ಪಂಡಿತ. ಇತಿಹಾಸ ವಿಭಾಗದ ಮುಖ್ಯಸ್ಥರಾದ ಉಮರ ಅಲಿ ಮಶಳೆ ಸಹಾಯಕ ಪ್ರಾಧ್ಯಪಕರು ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಉಪನ್ಯಾಸಕರು ವಿದ್ಯಾರ್ಥಿಗಳು ಇದ್ದರು

## ಜಿ.ಪಂ. ಕಚೇರಿಯಲ್ಲಿ ಬಸವ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಏ.30–ಬಸವ ಜಯಂತಿ ಅಂಗವಾಗಿ ಕಲಬುರಗಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಜಿಲ್ಲಾ ಪಂಚಾಯತ ಕಚೇರಿಯಲ್ಲಿ ಬುಧವಾರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಡಿಎಸ್ ರವರಾದ ಲಕ್ಷ್ಮಣ ಶೃಂಗೇರಿ, ಡಿಆರ್‌ಡಿಎ ಪಿಡಿ ರಾದ ಜಗದೇವಪ್ಪ ಬಿ, ಉಪನಿರ್ದೇಶಕ (ಯೋಜನೆ) ಮಧುಮತಿ, ಜಿಲ್ಲಾ ಪಂಚಾಯತ ಲೆಕ್ಕಾಧಿಕಾರಿ ಅಧಿಕಾರಿ ಪ್ರಕಾಶ ಜಾದವ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅಮರಾಪುರದಲ್ಲಿನ ಮಂತ್ರಾಲಯ ಮಠದ ಜಮೀನಿನಲ್ಲಿ ಗರಸು ಕಳವು

ಬಳ್ಳಾರಿ: ಮಂತ್ರಾಲಯ ಮಠಕ್ಕೆ ಸೇರಿದ ತಾಲೂಕಿನ ಅಮರಾಪುರ ಗ್ರಾಮದಲ್ಲಿರುವ ಜಮೀನಿನಲ್ಲಿ ಅಕ್ರಮವಾಗಿ ಮಣ್ಣು, ಗರಸು ಕಳ್ಳತನ ಮಾಡಿದ ಆರೋಪದ ಮೇಲೆ ಮೂವರ ವಿರುದ್ಧ ಗ್ರಾಮೀಣ ಠಾಣೆಯಲ್ಲಿ ಕೇಸು ದಾಖಲಾಗಿದೆ. ಕಕ್ಕಬೇವಿನಹಳ್ಳಿಯ ಸುದರ್ಶನ್, ಕಂಪನಿಯೊಂದರ ಗುತ್ತಿಗೆದಾರ ಮತ್ತು ಎಂಜಿನಿಯರ್‌ಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮಠದ ಎರಡು ಎಕರೆ ಜಮೀನನ್ನು ದೊಡ್ಡಬಸಪ್ಪ ಎಂಬುವವರಿಗೆ ಸಾಗುವಳಿಗೆ ನೀಡಲಾಗಿತ್ತು.

ಅವರು ಅದರಲ್ಲಿ ಕೃಷಿ ಮಾಡುತ್ತಿದ್ದರು. ಬೆಳೆ ಕಟಾವಿನ ನಂತರ ದೊಡ್ಡಬಸಪ್ಪ ಅವರು ಕೆಲಸಕ್ಕೆಂದು ಬೇರೆ ಕಡೆಗೆ ಹೋಗಿದ್ದರು. ಈ ವೇಳೆ, ಬೈಪಾಸ್ ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರುವ ಕಂಪನಿಯೊಂದರ ಎಂಜಿಯರ್ ಮತ್ತು ಸುದರ್ಶನ್ ಎಂಬುವವರು ಹಿಟಾಚಿ ಯಂತ್ರ ಮತ್ತು ಲಾರಿಗಳನ್ನು ಬಳಸಿ ಮಣ್ಣು ಮತ್ತು ಗರಸು ತೆ–ಗೆದುಕೊಂಡು ಸಾಗಿಸಿದ್ದಾರೆ ಎಂದು ದೊಡ್ಡಬಸಪ್ಪ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:9449732000

# ಜಗಜ್ಯೋತಿ ಬಸವೇಶ್ವರ ಭವ್ಯ ವಾದ ಮೂರ್ತಿ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಅಖಿಲಭಾರತವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಇಂದು ಜಗಜ್ಯೋತಿ ಬಸವೇಶ್ವರ ಭವ್ಯ ವಾದ ಮೂರ್ತಿ ಮೆರವಣಿಗೆಯನ್ನು ವಿವಿಧ ಕಲಾ ತಂಡಗಳು ಜೋತೆಗೆ ನಡೆಯಿತು. ಈ ಸಂದರ್ಭದಲ್ಲಿ ಶಾಸಕ ಚನ್ನಾರಡ್ಡಿ ತೂನ್ನೂರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಚನ್ನಪ್ಪಗೌಡ ಮೋಸಂಬಿ,ಯುವ ಮುಖಂಡ ಮಹೇಶರಡ್ಡಿ ಮುದ್ನಾಳ,ಬಸ್ಸುಗೌಡ ಬಿಳಾರ,ಯುಡ ಅಧ್ಯಕ್ಷ ವಿನಾಯಕ ಮಾಲಿಪಾಟೀಲ, ಶರಣಪ್ಪಗೌಡ ಮಲ್ಹಾರ,ಸೋಮನಾಥ್ ಜೈನ,ಅಯ್ಯಣ್ಣ ಹುಂಡೇಕಲ್,ಬಸಂರಾಯಗೌಡ ಮಾಲಿಪಾಟೀಲ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದರಾಜರಡ್ಡಿ ಕರಡ್ಡಿ,ಸಿದ್ದಪ್ಪ ಹೊಟ್ಟಿ,ವಿಲಾಸ ಪಾಟೀಲ್, ವೇಂಕಟರಡ್ಡಿ ವನ್ನಿಕೇರಿ, ಬಸವರಾಜ ಸೋನ್ನದ, ರುದ್ರುಗೌಡ ಪಾಟೀಲ್, ರವಿ ಬಾಪುರೆ, ರಮೇಶ್ ದೊಡಮನಿ, ಸುಭಾಷ್ ಕೋಲೀಗಿ,ರಾಜುಸ್ವಾಮಿ ಅನಂಪಲ್ಲಿ, ರಾಜಶೇಖರ್ ಚಾಮನಳ್ಳಿ,ಮಹದೇವಪ್ಪ ಅಬ್ಬೆ ತುಮಕೂರ,ಬಸವರಾಜ ಮೋಟನಳ್ಳೀ, ಲಕ್ಷ್ಮಿ ಪುತ್ರ ಮಾಲಿಪಾಟೀಲ,ರಾಜು ಉಪ್ಪಿನ್,ಅನ್ನಪೂರ್ಣ ಜವಳಿ,ಶರಣಪ್ಪ ಗುಳಿಗಿ,ಸೂಗು ಚಾಮ, ಬಸಣಗೌಡ ಕನ್ಯಕೋಳುರ,ಶರಣಪ್ಪಬೇನಕನಹಳ್ಳಿ, ಸುರೇಶ್ ಮಹಾಜನ್,ಬಾಬು ಗೌಡ ಮಾಚನೂರ, ನಾಗರಾಜ ಬೊಮರಡ್ಡಿ, ಸಾಹೇಬಗೌಡ, ಸೋಮಶೇಖರ್ ಮಣ್ಣೂರ ಮತ್ತು ಸಂಗರಡ್ಡಿ ಮಲ್ಹಾರ, ಸುರೇಶ್ ಜಾಕ, ಖಾನಾಪುರ,ಯಲ್ಲಾಲಿಂಗರಡ್ಡಿ ತಳಕ ಸೇರಿದಂತೆ ಸಮಾಜದ ಅನೇಕರು ಉಪಸ್ಥಿತರಿದ್ದರು.



ಬೀದರ ಜಿಲ್ಲೆಯ ಭಾಲ್ಕಿ ನಗರದಲಿಂದು ಬಸವೇಶ್ವರ ಉತ್ಸವ ಸಮಿತಿ ಭಾಲ್ಕಿ ವತಿಯಿಂದ ಆಯೋಜಿಸಲಾದ ವಿಶ್ವ ಗುರು ಬಸವಣ್ಣನವರ 892ನೇ ಜಯಂತಿ ಕಾರ್ಯಕ್ರಮದಲ್ಲಿ ಪರಮ ಪೂಜ್ಯ ಶ್ರೀ ಹವಾ ಮಲ್ಲಿನಾಥ ಮಹಾರಾಜ ನಿರ್ಗುಡಿ ಅಪ್ಪಾಜಿ ರವರು ಭಾಗವಹಿಸಿ ಡಾ.ಬಸವಲಿಂಗ ಪಟ್ಟದೇವರವು,ಗುರುಬಸವ ಪಟ್ಟದೇವರು, ಸಂಸದ ಸಾಗರ ಖಂಡ್ರೆ ರವರ ಜೋತೆ ಗುಡಿ ಭವ್ಯಾ ಉತ್ಸವಕ್ಕೆ ಚಾಲನೆ ನೀಡಿದರು. (ಮಲ್ಲಮ್ಮ ನುಡಿ ಚಿತ್ರ)

# ಬೀದರ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ವಯೋ ನಿವೃತಿ ಹೊಂದಿದ್ದ ಅಧಿಕಾರಿಯವರುಗಳ ಬೀಳ್ಕೊಡುಗೆ ಸಮಾರಂಭ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 30 : ಬೀದರ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ವಯೋ ನಿವೃತಿ ಹೊಂದಿದ್ದ ಅಧಿಕಾರಿಯವರ ಬೀಳ್ಕೊಡುಗೆ ಕಾರ್ಯಕ್ರಮವನ್ನುಹಮ್ಮಿಕೊಂಡಿದ್ದು, ಬೀದರ ಜಿಲ್ಲಾ ಪೊಲೀಸ್ ಘಟಕದಿಂದ ಇಲಾಖೆಯಲ್ಲಿ ನಿಷ್ಠೆಯಿಂದ,ಪ್ರಾಮಾಣಿಕವಾಗಿ ಪೂರ್ಣಾವಧಿ ಸೇವೆ ಸಲ್ಲಿಸಿ, ವಯೋನಿವೃತ್ತಿಹೊಂದುತ್ತಿರುವ ಶ್ರೀ ಫಯಾಜ ಅಲಿ, ಎ.ಎಸ್.ಐ, ಮಾರ್ಕೆಟ್ ಪೊಲೀಸ್ ಠಾಣೆ, ಶ್ರೀ ಹಣಮಂತ, ಎ.ಎಸ್.ಐ ಭಾಲ್ಕಿ ನಗರ ಪೊಲೀಸ್ ಠಾಣೆ ರವರು ಹಂಸಕವಿ ಎಂದು ಹೆಸರಾಗಿರುತ್ತಾರೆ.

ಶ್ರೀಯುತರವರು ತಮ್ಮ ನಿವೃತ್ತಿಜೀವನದಲ್ಲಿ ಸುಖ ಶಾಂತಿ ನೆಮ್ಮದಿ ಸಿಗುವಂತಾಗಲಿ ಹಾಗು ನಿಮ್ಮ ಅನುಭವವು ಸಮಾಜಕ್ಕೆ ಏನಾದರೊಂದು ಕೊಡುಗೆ ದೊರೆಯುವಂತಾಗಲಿ ಅಂತ ಹಾರೈಸುತ್ತಾಶ್ರೀಯುತರಿಗೆಸನ್ಮಾನಿಸಿ ಪ್ರಮಾಣ ಪತ್ರದೊಂದಿಗೆ ನೆನಪಿನ ಕಾಣಿಕೆ ನೀಡುವ ಮೂಲಕ ಶುಭ ಕೋರಲಾಯಿತು.

# ಬಸವಗಿರಿಯಲ್ಲಿ ಬಸವ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 30 : ಇಲ್ಲಿಯ ಬಸವಗಿರಿಯಲ್ಲಿ ಲಿಂಗಾಯತ ಮಹಾ ಮಠದ ವತಿಯಿಂದ ಬುಧವಾರ ಶ್ರದ್ಧೆ, ಭಕ್ತಿಯಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಆಚರಿಸಲಾಯಿತು.


ನೀಲಮ್ಮನ ಬಳಗದ ಸದಸ್ಯೆಯರಿಂದ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ, ಸಾಮೂಹಿಕ ಪ್ರಾರ್ಥನೆ ಹಾಗೂ ತೊಟ್ಟಿಲು ಕಾರ್ಯಕ್ರಮಗಳು ನೆರವೇರಿದವು.

ಸಾನಿಧ್ಯ ವಹಿಸಿದ್ದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಬಸವಣ್ಣ 12ನೇ ಶತಮಾನದಲ್ಲಿ ಜಾತಿ, ವರ್ಗ, ವರ್ಣ ರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ಕಟ್ಟಿದ್ದರು ಎಂದು ನುಡಿದರು.

ಸ್ತ್ರೀಸ್ವಾತಂತ್ರ್ಯದರೂವಾರಿಯಾಗಿದ್ದರು. ಅಂದಿನ ಕಾಲದಲ್ಲಿ ಮಹಿಳೆಯರು ಧಾರ್ಮಿಕವಾಗಿ ಅಸ್ಪೃಶ್ಯರಾಗಿದ್ದರು. ಅವರಿಗೆ ಪೂಜೆ, ಪ್ರಾರ್ಥನೆಗಳಲ್ಲಿ ಪಾಲ್ಗೊಳ್ಳುವ ಸ್ವಾತಂತ್ರ್ಯ ಕಲ್ಪಿಸಿದವರು ಬಸವಣ್ಣ ಎಂದು ಬಣ್ಣಿಸಿದರು.

ಡಾ.ಎಸ್.ಎಸ್. ಸಿದ್ದಾ-ರೆಡ್ಡಿ ಫೌಂಡೇಷನ್ ಅಧ್ಯಕ್ಷೆ ಗುರಮ್ಮ ಸಿದ್ದಾರೆಡ್ಡಿ, ನೀಲಮ್ಮನ ಬಳಗದ ನೀಲಮ್ಮ ರೂಗನ್, ಸಂಗೀತಾ ಗಣಾಚಾರಿ, ಶಾಮಲಾ ಎಲಿ, ನೀಲಾಂಬಿಕಾ ಮಠಪತಿ, ಶ್ರೀದೇವಿ ಶರಣಬಸವ, ಪ್ರಭಾವತಿ ಗೋರನಾಳೆ, ಸಾಹಿತಿ ರಮೇಶ ಮಠಪತಿ,ಪ್ರಮುಖರಾದ ಮಾಣಿಕಪ್ಪ ಗೋರನಾಳೆ, ರಾಜಕುಮಾರ ಪಾಟೀಲ, ಅಶೋಕ ಎಲಿ ಮತ್ತಿತರರು ಇದ್ದರು.

# ಬಸವೇಶ್ವರ ಜಯಂತಿ ಆಚರಣೆ ಮಾಡೋದು ಪುಣ್ಯದ ಕೆಲಸ:ಬಸವರಾಜ ವಿಭೂತಿಹಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಶತಮಾನಗಳಹಿಂದೆಯೇ ನಾಡಿಗೆ ಸಮಾನತೆಯ ಸಂದೇಶ ಸಾರುವ ಮೂಲಕ ಸಮಾಜದ ಸುಧಾರಣೆಗೆ ಶ್ರಮಿಸಿದ ವಚನಕಾರ ಬಸವಣ್ಣನವರ ಜಯಂತಿ ಅಂಗವಾಗಿ ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಣೆ ನಡೆಯಿತು.

ನಗರದ ಗ್ರೀನ್ ಸಿಟಿಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಕಾರ್ಯಕ್ರಮ ಉದ್ಘಾಟಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಮಾತನಾಡದ ಅವರು ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಿಸುವುದು ಪುಣ್ಯದ ಕೆಲಸವಾಗಿದ್ದು, ರಾಜ್ಯದ ಮಕ್ಕಳು ಸೇರಿದಂತೆ ಎಲ್ಲರಿಗೂ ಬಸವಣ್ಣನವರ ಬಗ್ಗೆ ತಿಳಿದಿದೆ. ಅಂಬೇಡ್ಕರ್ ಸಂವಿಧಾನದಲ್ಲಿ ತಿಳಿಸಿರುವ ಮಹಿಳಾ ಸಮಾನತೆ ಬಸವಣ್ಣನವರು ಅನುಭವ ಮಂಟಪದಲ್ಲಿ ಜಾರಿಗೆ ತಂದಿದ್ದರು. ಬಿಜೆಪಿ ಬಸವಣ್ಣನವರ ತತ್ವಗಳನ್ನು ಪಾಲಿಸುತ್ತಾ ಬಂದಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ ಮಾತನಾಡಿದ ಅವರು ಬಸವೇಶ್ವರರು ಸಮಾಜದಲ್ಲಿ ಜಾತಿ-ಮತ ಭೇದವಿಲ್ಲದೆ, ಎಲ್ಲರೂ ಸಮಾನರು ಎಂಬ ಸಂದೇಶವನ್ನು ಭಾರತವಲ್ಲದೆ ವಿಶ್ವಕ್ಕೆ ಪಸರಿಸಿದರು. ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಅವರ ಹಾದಿಯಲ್ಲಿ ಬಿಜೆಪಿ ಸಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ ಮಾತನಾಡಿದ ಅವರು ಪ್ರಧಾನಿ ಮಂತ್ರಿ ಮೋದಿ ಬಸವಣ್ಣನವರು ಹೇಳಿಕೆಯಂತೆ ಕಾಯಕವನ್ನು ನಂಬಿ ಬಂದವರು. ಬಸವಣ್ಣರ ತತ್ವಗಳನ್ನು 23 ಭಾಷೆಗಳಲ್ಲಿ ಜನರಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ. ಇಂದು ಜಾತಿ ವ್ಯವಸ್ಥೆ ಎಂಬುದು ರಾಜಕೀಯ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಯುವ ಮುಖಂಡ ಮಹೇಶರಡ್ಡಿ ಮುದ್ನಾಳ ಮಾತನಾಡಿದ ಅವರು ಬಸವಣ್ಣ ಜಗತ್ತು ಕಂಡ ಶ್ರೇಷ್ಠ ದಾರ್ಶನಿಕರಾಗಿದ್ದು, ಅವರ ಜಯಂತಿಯನ್ನು ರಾಷ್ಟ್ರೀಯ ಪಕ್ಷವೊಂದು ಆಚರಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಬಸವಣ್ಣರು ಕ್ರಾಂತಿಕಾರಿ, ಬಡವ, ದಲಿತರ ಉದ್ಧಾರಕರಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಕೊಡುಗೆ ನೀಡಿರುವ ಬಸವಣ್ಣರು ಸಮಾಜದಲ್ಲಿದ್ದ ಜಾತಿ ನಿರ್ಮೂಲನೆ, ಅಂತರ್ಜಾತಿ ವಿವಾಹ ಹಾಗೂ ಕಾಯಕ-ದಾಸೋಹಗಳನ್ನು ಬೋಧಿಸಿದ್ದು, ಅವರ ಮಾರ್ಗವನ್ನು ಪಾಲಿಸುವುದರಿಂದ ಸಾಧನೆ ಮಾಡಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಯುಡ ಮಾಜಿ ಅಧ್ಯಕ್ಷ ಬಸವರಾಜ ಚಂಡ್ರಕಿ ಮತ್ತು ರುದ್ರುಗೌಡ ಪಾಟೀಲ್, ಜಿಲ್ಲಾ ಉಪಾಧ್ಯಕ್ಷ ಬಸವರಾಜ ಸೋನ್ನದ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಹೊನಿಗೇರಿ, ನಗರಸಭೆ ಸದಸ್ಯ ಸ್ವಾಮಿದೇವ ದಾಸನಕೆರಿ ಮತ್ತು ವಿಜಯಲಕ್ಷ್ಮಿ ನಾಯಕ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜಶೇಖರ್ ಕಾಡಂನೊರ, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ಶಕುಂತಲಾ ಜಿ.ಭೀಮಬಾಯಿ ಶೆಂಡಿಗಿ, ರಮೇಶ್ ದೊಡಮನಿ, ಶರಣಗೌಡ ಅಲಿಪುರ, ಲಕ್ಷ್ಮಿ ಪುತ್ರ ಪಾಟೀಲ್, ಸೋಮು ಗೌಡ ಮುದ್ನಾಳ, ಶ್ರೀಕಾಂತ್ ಸುಂಗಲ್ಕರ್, ಶಿವು ಕೋಂಕಲ್, ದಾರು ಪವಾರ್ ಇಮಾನ್ ವೆಲ್ ಜಿಮ್ಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು....

# ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಸಾರ್ವಜನಿಕರಿಗೆ ಶುದ್ದ ಕುಡಿಯುವ ನೀರಿನ ಘಟಕ ಆರಂಭ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್: ಏ. 29. ಪಟ್ಟಣದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಶುದ್ಧ ಕುಡಿಯುವ ನೀರಿನ ಘಟಕವನ್ನು ಈ ವರ್ಷವೂ ಕೂಡ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಮಾಜ ಸೇವಕ ರಾಗಿರುವ ನರಸಿಮುಲು ಗಂಗಾನೊಳ ಪ್ರಾರಂಭಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ಡಾ.ವಿ.ಸಿ.ಮೈತ್ರಿ ನಿವೃತ್ತ ವೈದ್ಯದೀಕಾರಿಗಳು ಮಾತನಾಡಿ ಕಳೆದ ಐದು ವರ್ಷಗಳಿಂದ ಬೇಸಿಗೆಯಲ್ಲಿ ಜನಗಳ ದಾಹ ತಣಿಸಲು ನೀರಿನ ಅರವಟ್ಟಿಗೆ ನಿರ್ಮಿಸಿ ಜನರ ಸೇವೆ ಮಾಡುತ್ತಿರುವ ನರಸಿಮಲು ಅವರ ಕೆಲಸ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಪ್ರಾರಂಭೋತ್ಸವದಲ್ಲಿ ಗುರುಮಠಕಲ್ ಪುರಸಭೆಯ ಮುಖ್ಯಾಧಿಕಾರಿಗಳಾದ ಶ್ರೀಮತಿ ಭಾರತಿ, ನರಸಿಮಲು ನಿರೇಟಿ, ವಿಜಯಕುಮಾರ್ ನಿರೇಟಿ, ವೆಂಕಟಪ್ಪ ಅವಂಗಪುರ, ನರಸರೆಡ್ಡಿ ಗಡ್ಡೆಸೂಗುರ್, ನಾಗಭೂಷಣ ಅವಂಟಿ, ರಾಮುಲು ಕೋಡಿಗಂಟಿ, ಚನ್ನಪ್ಪ ಕಾಕಲವಾರ್, ಅಶೋಕ್ ಶನಿವಾರಂ ಮುರುಳಿ ಧರ ಜಗದೀಶ್ ಮೆಂಜಿ ಮತ್ತು ಊರಿನ ಹಿರಿಯ ಮುಖಂಡರು ಭಾಗಿಯಾಗಿ ಶುಭಕೋರಿದರು.

# ಸಮಾನತೆಯ ಸಿದ್ದಾಂತ ಸಾರಿದ ವಿಶ್ವಗುರು ಬಸವಣ್ಣನವರು -ಕುಲಪತಿ ಪ್ರೊ.ಬಿ.ಎಸ್.ಬಿರಾದಾರ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಏಪ್ರಿಲ್.30:-ಜಗತ್ತಿಗೆ ಜೀವಪರಕಾಳಜಿಯ,ಸಮಾನತೆಯ ಸಿದ್ಧಾಂತವನ್ನು ತಿಳಿಸಿದ ಮಹಾನುಭಾವರೆಂದರೆ ವಿಶ್ವಗುರು ಬಸವಣ್ಣನವರು ಎಂದು ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಎಸ್.ಬಿರಾದಾರರವರು ಹೇಳಿದರು. ಅವರು ಬೀದರ ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಬಸವಣ್ಣನವರ ಕಾಯಕನಿಷ್ಠೆಗೆ, ಪ್ರಭಾವಕ್ಕೆ ಒಳಗಾಗಿ ಅನೇಕ ಮಹಾನುಭಾವರುದೇಶವಿದೇಶದಿಂದ ಕರ್ನಾಟಕದ ಬಸವಕಲ್ಯಾಣಕ್ಕೆ ಬಂದರು.ಬಸವಕಲ್ಯಾಣದ ಅನುಭವ ಮಂಟಪ ಜಗತ್ತಿನ ಮೊದಲ ಪಾರ್ಲಿಮೆಂಟ್ ಎನಿಸಿಕೊಂಡಿತ್ತು. ಅಲ್ಲಿಗೆ ಬಂದಂತಹ ಎಲ್ಲರೂ ಸಮಾನರು. ಸಕಲ ಜೀವರುಗಳಿಗೆ ಲೇಸನೆ ಬಯಸುವ ಬಸವಾದಿ ಶರಣರು ಇಡೀ ಜಗತ್ತಿಗೆ ವಚನ ಸಾಹಿತ್ಯವನ್ನು ಕೊಡುಗೆಯಾಗಿ ನೀಡಿದರು ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಬೀದರ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವರಾದ ಸುರೇಖಾ ಕೆ.ಎ.ಎಸ್.ರವರು ಮಾತನಾಡಿ, ಬಸವಣ್ಣನವರ ಕೀರ್ತಿ ದಶದಿಕ್ಕುಗಳಿಗೂ ಹರಡಿ, ನವ ಸಮಾಜದ ನಿರ್ಮಾಣಕ್ಕೆ, ಶಾಂತಿ,ನೆಮ್ಮದಿಯ ಸಹಬಾಳ್ವೆಯ ಜೀವನಕ್ಕೆ ಕಾರಣವಾಯಿತು. ಜಾತಿ ಭೇದವಿಲ್ಲದ, ಲಿಂಗ ತಾರತಮ್ಯವಿಲ್ಲದ, ವರ್ಗ ತಾರತಮ್ಯವಿಲ್ಲದ ಸಮಾಜವನ್ನು ಕಟ್ಟಬಯಸಿದ ಶರಣರು ನಡೆದಂತೆ ನುಡಿದರು,


ನುಡಿದಂತೆ ನಡೆದರು, ಅವರ ಆದರ್ಶಗಳು, ವಿಚಾರಧಾರೆಗಳು ನೂರಾರು ವರ್ಷಗಳು ಕಳೆದರೂ ಇಂದಿಗೂ ಜೀವಂತವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಸಾಹಿತಿಗಳಾದ ಡಾ.ರಾಮಚಂದ್ರಗಣಾಪೂರರವರು ಮಾತನಾಡಿ, ಸಾಂಸ್ಕೃತಿಕ ನಾಯಕ ಬಸವಣ್ಣನವರು ಸಮಾನತೆಯ ಹರಿಕಾರರಾಗಿ ಆರೋಗ್ಯಕರ ಸಮಾಜದ ನಿರ್ಮಾಣಕ್ಕಾಗಿ ದುಡಿದವರು. ತಮ್ಮ ಅಮೂಲ್ಯ ವಚನಗಳ ಮೂಲಕ ಅಂದಿನ ಸಮಾಜದಲ್ಲಿನ ಅಂಧಃಕಾರ, ಅನಾಚಾರ, ಮೂಢನಂಬಿಕೆಗಳ ಸಂಕೋಲೆಗಳಿಂದ ಜನರನ್ನು ಮುಕ್ತಗೊಳಿಸುವ ವಿಶ್ವಗುರುವಾದರು. ತಾರತಮ್ಯವಿಲ್ಲದ ಸಮಾಜದ ನಿರ್ಮಾಣದಲ್ಲಿ ಜಗಜ್ಯೋತಿ ಬಸವಣ್ಣನವರ ಕೊಡುಗೆ ಅಪಾರವಾದುದು. ಅವರ ವಚನಗಳು ಇಂದಿಗೂ ಜನಮಾನಸದಲ್ಲಿ ದಾರಿದೀಪವಾಗಿವೆ ಎಂದರು.

ಈ ಕಾರ್ಯಕ್ರಮದಲ್ಲಿ ಬೀದರ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಡಾ.ರವೀಂದ್ರನಾಥ ವಿ.ಗಬಾಡಿ, ಉಪಸ್ಥಿತರಿದ್ದರು. ಕಾರ್ಯಕ್ರಮವು ಡಾ.ಶಾಂತಕುಮಾರ ಚಿದ್ರಿಯವರ ವಚನಗಾಯನದೊಂದಿಗೆ ಆರಂಭವಾಯಿತು. ಡಾ.ಶಿವಕುಮಾರ ಸಂಗನ್‌ರವರು ಸರ್ವರನ್ನು ಸ್ವಾಗತಿಸಿದರು, ಡಾ.ಶ್ರೀಕೃಷ್ಣ ಚಕ್ರವರ್ತಿ ವಂದಿಸಿದರು. ಡಾ.ಅರುಣಕುಮಾರ ಬೇಂದ್ರೆ ನಿರೂಪಿಸಿರು. ಸಮಾರಂಭದಲ್ಲಿ ಬೀದರ ವಿಶ್ವವಿದ್ಯಾಲಯದ ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

### ವಿಶ್ವಗುರು ಬಸವಣ್ಣನವರು ಸಾಮಾಜಿಕ ಸಮಾನತೆಗೆ

# ಹೋರಾಡಿದ ಮಹಾಚೇತನ-ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಏಪ್ರಿಲ್ 30-ಸಮಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ ವಿಶ್ವಗುರು ಬಸವಣ್ಣನವರು ಎಲ್ಲ ಸಮಾಜದ ಏಳ್ಗೆ ಮೂಲಕ ಸಮಾನತೆ ತರಲು ಹೋರಾಡಿದರು ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ವಿಶ್ವಗುರು ಬಸವಣ್ಣನವರ ಜಯಂತಿ ಅಂಗವಾಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ,ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿದರು.

ಹನ್ನೆರಡನೇಯ ಶತಮಾನದಲ್ಲಿಯೇ ಸಮಸಮಾಜದ ನಿರ್ಮಾಣಕ್ಕೆ ಹೋರಾಡಿದ ಶ್ರೀ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲ ಸಮಾಜದವರಿಗೆ ಒಗ್ಗೂಡಿಸಿ ಸಮಾನತೆ ತರಲು ಹೋರಾಡಿದರು ಎಂದು ಹೇಳಿದರು.

ಜಗಜ್ಯೋತಿ ಶ್ರೀ ಬಸವಣ್ಣನವರು ಪ್ರಾಮಾಣಿಕತೆಯ ಸಾಕಾರ ಮೂರ್ತಿಯಾಗಿದ್ದಾರೆ. ಜಾತಿ, ವರ್ಣಭೇದ, ವರ್ಗ ಭೇದ ಸಂದರ್ಭದ ಪರಿಸ್ಥಿತಿಗಳಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಸಮಾನತೆ ತರಲು ಶ್ರಮಿಸಿದರು. ಎಲ್ಲ ಜಾತಿಗಳ, ಧರ್ಮೀಯರನ್ನು ಒಗ್ಗೂಡಿಸಿದರು. ಅಂತಹ ಮಹಾನ್ ಚೇತನರ ವಚನಗಳು ಮನ: ಪರಿವರ್ತನೆಗೆ ನೆರವಾಗಲಿದ್ದು, ಇಂದಿನ ಯುವಜನಾಂಗ ಹಾಗೂ ಸಮಾಜಕ್ಕೆ ಉಪಯುಕ್ತ ಸಂದೇಶಗಳಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ನಗರಸಭೆ ಅಧ್ಯಕ್ಷ ಲಲಿತಾ ಅನಪುರ ಅವರು, ಎಲ್ಲ ಜಾತಿ, ಧರ್ಮದವರನ್ನು ಅನುಭವ ಮಂಟಪ ಮೂಲಕ ಒಟ್ಟುಗೂಡಿಸಿದ ಶ್ರೀ ಬಸವಣ್ಣನವರ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರು ಹನ್ನೆರಡನೇ ಶತಮಾನದಲ್ಲಿಯೇ ಸಮಾನತೆ ಸಾರಿದ ಬಸವಣ್ಣನವರು ವಿಶ್ವಕ್ಕೆ ಸಮಾನತೆ ಪರಿಕಲ್ಪನೆ ತೋರಿ, ವಿಶ್ವಗುರು ಆಗಿದ್ದಾರೆ. ಸಮಾನತೆ, ಕಾಯಕವೇ ಕೈಲಾಸ, ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿದ ಸಮಾಜ ಸುಧಾರಕರಾಗಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಶ್ರೀ ಸುಭಾಶ್ಚಂದ್ರ ಕೌಲಗಿ ಅವರು, ಶ್ರೀ ಬಸವಣ್ಣನವರ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ಇಂದಿನ ಯುವಜನಾಂಗಕ್ಕೆ ದಾರಿದೀಪವಾಗಿವೆ. ಸರ್ವ ಸಮಾಜದ ಸಂಘಟನಾ ಚತುರರು, ಕಾಯಕ ನಿಷ್ಠೆ, ವಿಶ್ವಕ್ಕೆ ಸಮಾನತೆ ಬೋಧಿಸಿದ ದಿವ್ಯ ಚೇತನರಾಗಿದ್ದಾರೆ. ಜಾತಿ, ವರ್ಣಭೇದ ಪದ್ಧತಿ ನಿರ್ಮೂಲನೆಗೆ ಹೋರಾಡಿದರು. ಅವರ ವಚನಗಳು ಹಾಗೂ ತತ್ವ ಆದರ್ಶಗಳು ಇಂದಿನ ಯುವಜನತೆಗೆ ದಾರಿದೀಪವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜಸೇವಕರಾದ ವಿಶ್ವನಾಥ್ ಕಾಜಗಾರ್, ರಮೇಶ್ ದೊಡಮನಿ, ಸದಾಶಿವಪ್ಪ ಚಂದನಕೇರಿ, ಸಿದ್ದಪ್ಪ ಹೊಟ್ಟಿ, ಅನ್ನಪೂರ್ಣ ಜವಳಿ, ಅನ್ನಪೂರ್ಣ ಸಿ.ಪಾಟೀಲ, ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿನಾಯಕ ಮಾಲಿಪಾಟೀಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ವಿಜಯಕುಮಾರ್ ಮಡ್ಡೆ ಅಖಿಲಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಚನ್ನಪ್ಪಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ.ಸಿದ್ದರಾಜ ರೆಡ್ಡಿ ಕಾರ್ಯಕ್ರಮ ನಿರ್ವಹಿಸಿ ಕೊನೆಯಲ್ಲಿ ವಂದಿಸಿದರು.

ಬಳ್ಳಾರಿ: ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ

# ಜಿಲ್ಲಾಡಳಿತದಿಂದ ಪುಷ್ಪನಮನ ಸಲ್ಲಿಕೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.30–ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಅಂಗವಾಗಿ ಬುಧವಾರ ನಗರದ ಹೆಚ್.ಆರ್.ಗವಿಯಪ್ಪ ವೃತ್ತದ ಬಳಿಯ ಬಸವೇಶ್ವರರ ಪುತ್ಥಳಿಗೆ ಜಿಲ್ಲಾಡಳಿತ ವತಿಯಿಂದ ಮಾಲಾರ್ಪಣೆ ಮಾಡಿ,ಪುಷ್ಪನಮನ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸಾಂಸ್ಕೃತಿಕ ನಾಯಕ ಬಸವೇಶ್ವರರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ, ಗೌರವ ನಮನ ಸಲ್ಲಿಸಿದರು. ಮಹಾಮಾನವತಾವಾದಿ ಬಸವೇಶ್ವರರ ಆಚಾರ– ವಿಚಾರಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕಿದೆ ಎಂದು ಹೇಳಿದ ಅವರು, ಇದೇ ಸಂದರ್ಭದಲ್ಲಿ ಬಸವೇಶ್ವರ ಜಯಂತಿಯ ಶುಭಾಶಯ ತಿಳಿಸಿದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್. ಝುಬೇರ್,ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಜಿಲ್ಲಾಧ್ಯಕ್ಷ ಚಿದಾನಂದಪ್ಪ ಕೆ. ಇ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಅನೇಕರು ಇದ್ದರು.

# ಬಳ್ಳಾರಿ; ಜಿಲ್ಲಾ ಕೇಂದ್ರದಲ್ಲಿ ಭಗವಾನ್ ಬುದ್ಧ ಜಯಂತಿ ಅರ್ಥಪೂರ್ಣ ಆಚರಣೆ: ಸಹಾಯಕ ಆಯುಕ್ತ ಪಿ.ಪ್ರಮೋದ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.30–ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಮೇ 12 ರಂದು ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ಹೇಳಿದರು.

ಸೋಮವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗವಾನ್ ಬುದ್ಧ ಜಯಂತಿ ಆಚರಣೆ ಕುರಿತು ಆಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಭಗವಾನ್ ಬುದ್ಧನ ಜಯಂತಿ ಕಾರ್ಯಕ್ರಮವನ್ನು ಆಚರಿಸಲು ರಾಜ್ಯ ಸರ್ಕಾರದ ನಿರ್ದೇಶನವಿದ್ದು, ಜಿಲ್ಲಾ ಕೇಂದ್ರದಲ್ಲಿ ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮೇ 12 ರಂದು ಸಂಜೆ 06.30 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಆಚರಿಸಲು ನಿರ್ಧರಿಸಲಾಗಿದ್ದು, ಜಯಂತಿ ಕಾರ್ಯಕ್ರಮ ನಡೆಯುವ ಸ್ಥಳದ ಸ್ವಚ್ಛತೆ, ಆಸನಗಳ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಇತರೆ ವ್ಯವಸ್ಥೆ ಮಾಡಬೇಕು ಎಂದು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಂದು ಸಂಜೆ 04.30 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಜಯಂತಿ ಅಂಗವಾಗಿ ಭವ್ಯ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ಮುನಿಸಿಪಲ್ ಕಾಲೇಜು ಮೈದಾನ–ಗಡಿಗಿ ಚೆನ್ನಪ್ಪ ವೃತ್ತ–ಬೆಂಗಳೂರು ರಸ್ತೆ–ಬ್ರೂಸ್‌ಪೇಟೆ ಪೊಲೀಸ್ ಠಾಣೆ ಮುಂಭಾಗ–ಜೈನ್ ಮಾರ್ಕೆಟ್ ರಸ್ತೆ–ಹೆಚ್.ಆರ್. ಗವಿಯಪ್ಪ ವೃತ್ತ–ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ನಡೆಯಲಿದೆ.

ಜಯಂತಿ ಆಚರಣೆ ಸಂದರ್ಭದಲ್ಲಿ ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು. ಬುದ್ಧ ಗಾಯನ ಕಾರ್ಯಕ್ರಮ ಏರ್ಪಡಿಸಲಾಗುವುದು. ಮಹಾನ್ ವ್ಯಕ್ತಿಗಳ ವಿಚಾರಧಾರೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ನುರಿತ ಉಪನ್ಯಾಸಕರಿಂದ ವಿಶೇಷ ಉಪನ್ಯಾಸ ಆಯೋಜಿಸಲಾಗುವುದು ಎಂದರು.

ಜಯಂತಿ ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗುವುದು. ಜಯಂತಿ ಕಾರ್ಯಕ್ರಮಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಬುದ್ಧ ವಿಹಾರ ಧ್ಯಾನ ಕೇಂದ್ರ ಆರಂಭಿಸಬೇಕು ಎಂದು ಸಭೆಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬೇವಿನಳ್ಳಿ ಅದ್ದೂರಿ ಡಾ, ಅಂಬೇಡ್ಕರ ಜಯಂತಿ

# ಮೌಢ್ಯಗಳ ಅಮಲಿನಲ್ಲಿ ನರಳುತ್ತಿರುವ ಶೋಷಿತ ಸಮಾಜ ಕಳವಳ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಆಧುನಿಕ ತಂತ್ರಜ್ಞಾನದ ಯುಗದಲ್ಲೂ ಇಂದು ವೈಧಿಕತೆಯಲ್ಲಿ ಬದುಕು ಸಾಗಿಸುತ್ತಿದ್ದೇವೆ. ಹರಕೆಗಳನ್ನು ಹೊತ್ತು ಭಕ್ತಿ ಪ್ರದರ್ಶನ ಮಾಡುವ ದಲಿತ ಸಮುದಾಯ ಮೌಢ್ಯಗಳ ಜಾಡಿನಲ್ಲಿ ನರಳುತ್ತಿದೆ ಎಂದು ದಲಿತ ಸಾಹಿತಿ ದೇವಿಂದ್ರ ಹೆಗಡೆ ಮತ್ತು ದಲಿತ ಮುಖಂಡ ಮಲ್ಲಿಕಾರ್ಜುನ ಪೂಜಾರಿಯವರು ಕಳವಳ ವ್ಯಕ್ತಪಡಿಸಿದರು. ಅವರು ತಾಲುಕಿನ ಬೇವಿನಳ್ಳಿ ಗ್ರಾಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ, ಭಾರತರತ್ನ ಡಾ,ಬಾಬಾಸಾಹೇಬ್ ಅಂಬೇಡ್ಕರವರ 134 ನೆಯ ಜಯಂತೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.ಮುಂದುವರೆದು ಮಾತನಾಡಿದ ಅವರು, ,ಡಾ, ಬಾಬಾಸಾಹೇಬರ ಸಂವಿಧಾನ ಪ್ರತಿಯೊಬ್ಬರು ಓದಬೇಕು, ಅದನ್ನು ಸಮರ್ಪಕವಾಗಿ ಅರ್ಥೈಸಿಕೊಳ್ಳೇಕು, ಶಿಕ್ಷಣದತ್ತ ಹೆಚ್ಚು ಒಲವು ನೀಡಿ, ಗ್ರಾಮದಲ್ಲಿನ ಪ್ರತಿಯೊಬ್ಬರ ಮಕ್ಕಳಿಗೂ ಶಿಕ್ಷಣ ಕೊಡಿಸುವ ಜವಾಬ್ದಾರಿ ಇಂದಿನ ಯುವಕರ ಮೇಲಿದೆ ಎಂದು ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ಭೀಮ ಜ್ಯೋತಿ ಬೇಳಗಿಸಿ ಮಾತನಾಡಿದ, ಯಾದಗಿರಿ ಜಿಲ್ಲಾ ಕೆಪಿಸಿಸಿ ಎಸ್,ಸಿ, ಘಟಕದ ಜಿಲ್ಲಾಧ್ಯಕ್ಷರಾದ ನೀಲಕಂಠ ಬಡಿಗೇರ ಮಾತನಾಡಿ,ಮೌಢ್ಯ ಮುಕ್ತ ಭಾರತವಾಗಬೇಕಾದಲ್ಲಿ ನಾವುಗಳು ಧಮ್ಮ ಸಂಬುದ್ಧನ ಪಂಚಶೀಲ ಮಾಹಾಮಂತ್ರಗಳನ್ನು ಪಠಣ ಮಾಡಿ ಇಂದಿನ ಯುವ ಸಮಾಜಕ್ಕೆ ಬುದ್ಧ ಬಸವ ಡಾ, ಅಂಬೇಡ್ಕರವರ ಸಿದ್ದಾಂತಗಳನ್ನು ಅರಿವು ಮೂಡಿಸಲು ಮುಂದಾದಲ್ಲಿ ಮೌಢ್ಯಗಳ ಮಲಿನದಿಂದ ಹೊರಬರಲು ಸಾದ್ಯವಾಗುತ್ತದೆ, ಎಂದು ಬಡಿಗೇರವರು ಮಾರ್ಮಿಕವಾಗಿ ಮಾತನಾಡಿದರು. ಯಾದಗಿರಿ ಜಿಲ್ಲಾ ಕ,ರಾ,ದ,ಸಂ,ಸ ಸಂಚಾಲಕರಾದ ಶಿವುಪುತ್ರ ಜವಳಿಯವರು ಭೀಮ ಜ್ಯೋತಿಯನ್ನು ಇರ್ವರು ವಿಧ್ಯುಕ್ತವಾಗಿ ಬೆಳಗಿಸಿ ಮಾತನಾಡಿದರು,ನಗರಸಭೆ ಸದಸ್ಯರಾದ ಶಿವುಕುಮಾರ ತಳವಾರುವರು ಪುಷ್ಪಾರ್ಚನೆ ಮಾಡಿದರು,ಯಾದಗಿರಿ ಜಿಲ್ಲಾ ಎಸ್,ಸಿ, ಎಸ್,ಟಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀಶೈಲ್ ಹೊಸಮನಿಯರು ವಿಶೇಷ ಉಪನ್ಯಾಷ ನೀಡಿ, ಡಾ, ಬಿ,ಆರ್, ಅಂಬೇಡ್ಕರ ವರ ಜೀವನ ಆದರ್ಶಗಳು ಮತ್ತು ಬಸವಣ್ಣ, ಬುದ್ದರ ತತ್ವ ಸಿದ್ದಾಂತಗಳ ಕುರಿತು ಮನವರಿಕೆ ಮಾಡಿದರು, ಸಮಾರಂಭದ ಅಧ್ಯಕ್ಷತೆಯನ್ನು ಬೇವಿನಳ್ಳಿ ಡಾ, ಬಿ,ಆರ್,ಅಂಬೇಡ್ಕರ 134 ನೆಯ ಜಯಂತೋತ್ಸವ ಸಮಿತಿ ಅಧ್ಯಕ್ಷರಾದ ಭೀಮಾಶಂಕರ ದೊಡ್ಮನಿ ವಹಿಸಿದ್ದರು,ವೇದಿಕೆಯಲ್ಲಿ ಶರಣು ದೊರನಳ್ಳಿ,ಶುಭಾಸ ತಳವಾರ, ಚಂದ್ರಶೇಖರ ಗುತ್ತೆದಾರರ. ನಿವೃತ್ತ ಶಿಕ್ಷಕರಾದ ಹಣಮಂತ ಕಾಂಬಳೆ, ಗ್ರಾಮದ ಹಿರಿಯ ಮುಖಂಡರಾದ ಮಲ್ಲಣಗೌಡ ಪಾಟೀಲ್ ಮಲ್ಲೇಶಪ್ಪ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು, ಈ ಕಾರ್ಯಕ್ರಮದಲ್ಲಿ ಎಸ್,ಎಸ್,ಎಲ್,ಸಿ,ಯಲ್ಲಿ ಅತ್ಯುತ್ತಮ ಅಂಕ ಪಡೆದ ವಿಧ್ಯಾರ್ಥಿಗಳಾದ ಅಕ್ಕಮಾದೇವಿ,ಚೈತ್ರಾ,ಮಾಹಾದೇವಪ್ಪ ಮಲ್ಲಿಕಾರ್ಜುನರವರಿಗೆ ಸನ್ಮಾನಿಸಲಾಯಿತು,ಬಲಭೀಮ ಬೇವಿನಳ್ಳಿ ಕಾರ್ಯಕ್ರಮ ನಿರೂಪಿಸಿದರು, ಸಿದ್ದಣ್ಣ ಹೊಸಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಮರೆಪ್ಪ ಹಾಲಗೇರಾರವರು ಸರ್ವರನ್ನು ಸ್ವಾಗತಿಸಿದರು. ಭೀಮಶಂಕರ ಹಾಲಗೇರಾರವರು ವಂದಿಸಿದರು, ಜೈಭೀಮ ಯುವಕ ಸಂಘ ಬೇವಿನಳ್ಳಿ ಅಧ್ಯಕ್ಷರು, ಪದಾಧಿಕಾರಿಗಳು ಸಕ್ರಿಯ ಕಾರ್ಯಕರ್ತರು ಆಗಮಿಸಿದ್ದರು,ಜಯಂತೋತ್ಸವ ಸಮತಿ ಉಪಾಧ್ಯಕ್ಷರಾದ ಮಲ್ಲಿಕಾಜುನ ಬಸವಂತಪೂರ, ಸೇರಿದಂತೆ ಗ್ರಾಮದ ಹಿರಿಯರು ದಲಿತ ಸಮುದಾಯ ಗಣ್ಯರು ಪಾಲ್ಗೊಂಡಿದ್ದರು,

# ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಕುಕನೂರ ತಾಲೂಕಿನ ಮಸಬ ಹಂಚಿನಾಳ ಗ್ರಾಮ ಪಂಚಾಯಿತಿಯಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮುಖಾಂತರ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೈಜನಾಥ ಪಾಟೀಲ್ ಮಾತನಾಡುತ್ತಾ ಜಗಜ್ಯೋತಿ ಬಸವೇಶ್ವರರ ತತ್ವ ಆದರ್ಶಗಳು ಸಾತ್ವಿಕ ಗುಣಗಳಿಂದ ಗಮನ ಸೆಳೆದ ವಿಶ್ವಗುರು ಬಸವಣ್ಣನವರ ತತ್ವ ಆದರ್ಶಗಳು ಎಷ್ಟೇ ಕಾಲ ಗತಿಸಿದರು ಅಜರಾಮರವಾಗಿ ಉಳಿಯಲಿದೆ ಎಂದು ಹೇಳಿದರು.

ಜಗಜ್ಯೋತಿ ಬಸವೇಶ್ವರರ ತತ್ವದರ್ಶನಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡು ನಡೆದಾಗ ಮಾತ್ರ ಬಸವೇಶ್ವರ ಕಾಯಕದೊಂದಿಗೆ ಕಲ್ಯಾಣವನ್ನು ಕೈಲಾಸ ಮಾಡಿದ ಕೀರ್ತಿ ಜಗಜ್ಯೋತಿ ಬಸವೇಶ್ವರರ ಆದಿಯಾಗಿ ಎಲ್ಲಾ ನಾಡಿನ ಶರಣರಿಗೆ ಸಂತರಿಗೆ ಸಲ್ಲುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಸದಸ್ಯರು ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗ ಹಾಗೂ ಇತರರು ಇದ್ದರು.

# ಅನಾಮಧೇಯ ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.30–ನಗರದ ಹದ್ದಿನಗುಂಡು ರೈಲಿ ನಿಲ್ದಾಣಗಳ ಮಧ್ಯೆ ಅಂದಾಜು 30 ವರ್ಷದ ಅನಾಮದೇಯ ವ್ಯಕ್ತಿಯು ಏ.27 ರಂದು ರೈಲ್ವೇ ಕೀ ಮೀ ನಂ:209/2–6 ರ ಮಧ್ಯೆ ಅಪ್ ಲೈನ್ ಹಳಿಯಲ್ಲಿ ಮೃತಪಟ್ಟಿದ್ದು, ಮೃತನ ವಾರಸುದಾರರು ತಿಳಿದಿರುವುದಿಲ್ಲ. ಈ ಕುರಿತು ರೈಲ್ವೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಉಪ ನಿರೀಕ್ಷಕರು ತಿಳಿಸಿದ್ದಾರೆ.

ಚಹರೆ ಗುರುತು:

ಅಂದಾಜು 5.5 ಅಡಿ ಎತ್ತರ, ಮುಖ ಚಿದ್ರಚಿದ್ರವಾಗಿದೆ. ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ತಲೆಯಲ್ಲಿ 02 ಇಂಚು ಕೂದಲು ಮತ್ತು ಸಣ್ಣ ಮೀಸೆ ಇರುತ್ತದೆ.

ಕೆಂಪು ಬಣ್ಣದ ಮತ್ತು ನೆರಳೆ ಮಿಶ್ರಿತ ಕಟ್ಟಾಗಿರುವ ರೇಡಿಮೇಡ್ ಅಂಗಿ ಖಇಗಿಂಬಕ ಅಂತಾ ಇರುತ್ತದೆ ಮತ್ತು ಆಕಾಶ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ, ಸೊಂಟದಲ್ಲಿ ಕೆಂಪು ಉಡದಾರ ಅದರಲ್ಲಿ ಒಂದು ತಾಯತ ಮತ್ತು ಬಲಗೈಗೆ ಒಂದು ದಾರ ಕಟ್ಟಿರುತ್ತಾನೆ.

ವ್ಯಕ್ತಿಯ ಬಗ್ಗೆ ಸುಳಿವು ಸಿಕ್ಕಲ್ಲಿ ರೈಲ್ವೇ ಪೊಲೀಸ್ ಠಾಣೆಯ ಪಿಎಸ್ ಮೊ.948082131, ರೈಲ್ವೇ ಪೊಲೀಸ್ ಠಾಣೆ ರಾಯಚೂರು ಮೊ.9480800471 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ 02 ರಂದು ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.30–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಮೇ 02 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಂಗನಕಲ್ಲು ರಸ್ತೆಯ ಶ್ರೀ ಭಾರತೀತೀರ್ಥ ಸಭಾಭವನದಲ್ಲಿ ಆಯೋಜಿಸಲಾಗಿದೆ.

ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ, ಈ.ಅನ್ನಪೂರ್ಣ,ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ, ವೈ.ಎಂ.ಸತೀಶ್,ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್,ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಶ್ರೀ ಶೃಂಗೇರಿ ಶಂಕರಮಠದ ಗೌರವ ವ್ಯವಸ್ಥಾಪಕರಾದ ಬಿ.ಕೆ.ಬಿ.ಎನ್.ಮೂರ್ತಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ವೇದಬ್ರಹ್ಮಶ್ರೀರಾಮಸುಬ್ರಹ್ಮಣ್ಯ ಶರ್ಮ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಬಳ್ಳಾರಿಯ ರಾಜೇಶ್ವರಿ ಅವರ ತಂಡದಿಂದ ಭಕ್ತಿ ಸಂಗೀತ ಇರಲಿದೆ.

*ಮೆರವಣಿಗೆ:*

ಜಯಂತಿ ಅಂಗವಾಗಿ ಮೇ 01 ರಂದು ಸಂಜೆ 4.30 ಗಂಟೆಗೆ ನಗರದ ಸತ್ಯನಾರಾಯಣ ಪೇಟೆ–ವೆಂಕಟೇಶ್ವರ ದೇವಸ್ಥಾನದಿಂದ–ಇಂದಿರಾ ವೃತ್ತ–ಬೆಂಗಳೂರು ರಸ್ತೆ–ಸಭಾಪತಿ ಬೀದಿ–ಶ್ರೀ ಶೃಂಗೇರಿ ಶಂಕರಮಠದವರಗೆ ಮೆರವಣಿಗೆ ನಡೆಯಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್,ಮಹಾನಗರ ಪಾಲಿಕೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಎಷ್ಟೇ ಕಾಲ ಗತಿಸಿದರೂ ಬಸವ ತತ್ವ ಅಜರಾಮರ–ಪ.ಪೂ. ಕಲ್ಲಯ್ಯಜ್ಜನವರು



ಮಲ್ಲಮ್ಮ ನುಡಿ ವಾರ್ತೆ

ಯಲಬುರ್ಗಾ : ಸಾತ್ವಿಕ ಗುಣಗಳಿಂದ ಗಮನ ಸೆಳೆದ ವಿಶ್ವಗುರು ಬಸವಣ್ಣನವರ ತತ್ವ ಆದರ್ಶಗಳು ಎಷ್ಟೇ ಕಾಲ ಗತಿಸಿದರೂ ಅಜರಾಮರವಾಗಿ ಉಳಿಯಲಿವೆ ಎಂದು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಕಲ್ಲಯ್ಯಜ್ಜನವರು ಹೇಳಿದರು.

ಪಟ್ಟಣದ ಸಾಯಿ ಪ್ಯಾಲೇಸ್ ಆವರಣದಲ್ಲಿ ಬಸವ ಶಿವಯೋಗ ಸಮಿತಿಯವರು ಆಯೋಜಿಸಿದ "ಬಸವ ದರ್ಶನ –ಪ್ರವಚನದ ಸಾನಿಧ್ಯವಹಿಸಿ ಹಾಗೂ 2789 ನೇ ತುಲಾಭಾರವನ್ನು ಸ್ವೀಕರಿಸಿ ಮಾತನಾಡಿದ ಅವರು ಹಣ ಇದ್ದರ ಮಾರುಕಟ್ಟೆಗೆ ಹೋಗಿ ಏನಾದರೂ ನಮಗೆ ಬೇಕಾದ ವಸ್ತುವನ್ನು ಖರೀದಿಸ ಬಹುದು ಆದರೆ ಎಷ್ಟೆ ಹಣಕೊಟ್ಟರೂ ಜ್ಞಾನ ಯಾರಿಗೂ ಸಿಗುವದಿಲ್ಲ ಅಂತಹ ಮಹಾನ ಕಾರ್ಯವನ್ನು ಬಸವಶಿವಯೋಗಸಮಿತಿಯವರು ಜ್ಞಾನವನ್ನು ನೀಡುತ್ತಿರುವದರೊಂದಿಗೆ ಅನ್ನದಾಸೋಹವನ್ನು ಮಾಡುತ್ತಿರುವುದು ಈ ಭಾಗದ ಜನರ ಪುಣ್ಯ ಎಂದರು. ಕಾಯಕದೊಂದಿಗೆ ಕಲ್ಯಾಣವನ್ನು ಕೈಲಾಸ ಮಾಡಿದ ಕೀರ್ತಿ ಬಸವಣ್ಣನ ಯಾದಿಯಾಗಿ ಎಲ್ಲಾ ಶರಣರಿಗೆ ಸಲ್ಲುತ್ತದೆ.

ವೀರೇಶ್ವರ ಪುಣ್ಯಾಶ್ರಮಕ್ಕೆ ನೀವು ನಮಗೆ ಏನು ಕೊಡಬೇಕಾಗಿಲ್ಲ ಅಂಧ–ಅನಾಥ –ಕಣ್ಣಿಲ್ಲದವರು ನಿಮ್ಮಲ್ಲಿ ಇದ್ದರೆ ನಮಗೆ ನೀಡಿರಿ ಅವರ ಬದುಕು ಸ್ವಾವಲಂಬಿ ಆಗಬೇಕು ಎನ್ನುವ ಕನಸನ್ನು ಹೊಂದಿದ್ದ ಪಂಚಾಕ್ಷರಿ ಹಾಗೂ ಪುಟ್ಟರಾಜರ ಕನಸನ್ನು ನನಸನ್ನಾಗಿ ಮಾಡುವ ಭಾರ ಹೊತ್ತುಕೊಂಡು ಇಂದು ಜೀವನವನ್ನು ಸವೆಸುತ್ತಿದ್ದೇವೆ. ಆ ನಿಟ್ಟಿನಲ್ಲಿ ನೀವು ನಮಗೆ ಸಹಕಾರ ನೀಡಿ ಎಂದರು.

ತಾಲೂಕಾ ವಕೀಲರ ಸಂಘದ ಎಲ್ಲಾ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು ಸನ್ಮಾನಿತರ ಪರವಾಗಿ ನೂತನ ಅಧ್ಯಕ್ಷ ಸುಭಾಷ ಹೊಂಬಳ ಹಾಗು ಉಪಾಧ್ಯಕ್ಷ ಎಂ.ಎಸ್.ನಾಯ್ಕರ ರವರು ಮಾತನಾಡಿ ಕಾಯಕವೇ ಕೈಲಾಸವೆಂದ ಬಸವಣ್ಣನವರ ತತ್ವ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.

ಬಸವ ಶಿವಯೋಗ ಸಮಿತಿಯ ಅಧ್ಯಕ್ಷ ಸಂಗಣ್ಣ ಟೆಂಗಿನಕಾಯಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಬಸವ ತತ್ವವು ವ್ಯಾಪಕವಾಗಿ ಹರಡಿ ಎಲ್ಲಾ ಸ್ಥರದ ಜನರು ಸಮಾಜ ಮುಖಿಗಳಾಗಬೇಕು ಹಾಗು ಸ್ವಾವಲಂಬಿಗಳಾಗಿ ಬದುಕನ್ನು ಕಟ್ಟಿಕೊಳ್ಳಬೇಕು ಆ ನಿಟ್ಟಿನಲ್ಲಿ ಶರಣರ ಹಾಗೂ ಕಾಯಕಯೋಗಿಗಳ ದರ್ಶನದ ಭಾಗ್ಯ ಜನರಿಗೆ ಮುಟ್ಟಲಿ ಎನ್ನುವ ಸದುದ್ಧೇಶವನ್ನು ಸಮಿತಿ ಹೊಂದಿದೆ ಎಂದರು.

ಡಾ! ಬಿ.ವಿ.ಇಟಗಿ – ಪ್ರಾ.ವಿರುಪಾಕ್ಷಪ್ಪ ಹನುಮಶೆಟ್ಟಿ – ವಕೀಲರಾದ ಉಮೇಶ ಮೆಣಸಗೇರಿ – ಆನಂದ ಉಳ್ಳಾಗಡ್ಡಿ – ಮಾಹಂತೇಶ – ಬಸವರಾಜ ತುರಕಾಣಿ – ಅನ್ನಪೂರ್ಣ ಟೆಂಗಿನಕಾಯಿ – ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಶಕುಂತಲಾ ಪಾಟೀಲ – ಮುದಕಪ್ಪ ಸಜ್ಜನ – ಸಂಗಣ್ಣ ಕರಂಡಿ– ಮಲ್ಲಿಕಾರ್ಜುನ ಟೆಂಗಿನಕಾಯಿ– ಕಲ್ಲಯ್ಯ ಕಲ್ಲೂರ – ಅನುಸೂಯಾ ಟೆಂಗಿನಕಾಯಿ – ವೀರೇಶ ಟೆಂಗಿನಕಾಯಿ ಇನ್ನಿತರ ಗಣ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಛಾಯಾದೇವಿ ಟೆಂಗಿನಕಾಯ ಯವರು ಕಲ್ಲಯ್ಯಜ್ಜನವರಿಗೆ ತುಲಾಭಾರ ವನ್ನು ಭಕ್ತಿಯಂದ ಸಮರ್ಪಿಸಿದರು.

ಸಂಗೀತಗಾರರಾದ ಕಲ್ಲಿನಾಥ ಶಾಸ್ತ್ರೀಗಳು – ಖಾದರಸಾಬ ! ಉಮಾ ಮಹೇಶ್ವರಿ ಹೂಗಾರ ರವರ ಸಂಗೀತ ಕಾರ್ಯಕ್ರಮ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಮುಖ್ಯೋಪಾಧ್ಯಯ ದೇವಪ್ಪ ವಾಲ್ಮೀಕಿ ನಿರೂಪಿಸಿದರು.

# ರಾಹುಲ್ ಗಾಂಧಿ ಹೇಳಿಕೆಗೆ ಮೋಹನ್ ರಾಜ್ ಕಿಡಿ.




ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ ಇತ್ತೀಚಿಗೆ ಹೇಳಿಕೆ ನೀಡಿರುವ ರಾಹುಲ್ ಗಾಂಧಿಯವರು ಸಾವಿರ ವರ್ಷಗಳ ಹಿಂದೆ ಸಂವಿಧಾನ ಬರೆದಿದ್ದು. ಇದನ್ನು ಪ್ರೊಫೆಸರ್ ಬಿ ಕೃಷ್ಣಪ್ಪ ಸಂಘಟನೆಯ ಜಿಲ್ಲಾ ಸಂಚಾಲಕರು ಮೋಹನ್ ರಾಜ್ ಖಂಡಿಸಿದ್ದಾರೆ.

ರಾಹುಲ್ ಗಾಂಧಿಯವರು ಬರೀ ಸಂವಿಧಾನ ಪುಸ್ತಕವನ್ನು ಹಿಡಿದುಕೊಂಡು ಬರೀ ಪೋಟಾಟಿಕೆ ಮಾತುಗಳಿಂದ ಜನರಿಗೆ ಮೋಸಗೊಳಿಸಬೇಡಿ. ಸಂವಿಧಾನದ ಆಶಯ ಎಂತದು. ಅಂಬೇಡ್ಕರ್ ಅವರು ಬರೆದಿರುವ ವಿಚಾರಗಳು ಎಂತಹದು ಎಂದು ತಿಳಿದುಕೊಂಡು ತದನಂತರ ಮಾತನಾಡಬೇಕು. ಸಾವಿರ ವರ್ಷಗಳ ಹಿಂದೆ ಈ ಸಂವಿಧಾನವನ್ನು ಬರೆದಿದ್ದು ಎಂಬ ಮಾತು ಅವರ ಬಾಯಿಂದ ಬಂದಿರುವ ಮಾತಿನ ಅರ್ಥವನ್ನು ತಿಳಿಸಬೇಕು. ಅವರು ಸಂವಿಧಾನದ ಬಗ್ಗೆ ಪುಸ್ತಕ ಹಿಡಿದುಕೊಂಡು ಬರೀ ತಮ್ಮ ಬೇಳೆ ಬಳಸಿಕೊಳ್ಳುತ್ತಿರುವ ಇಂಥ ನಾಯಕರನ್ನು ನಾವು ಗೌರವಿಸಬೇಕೇ? ತಮ್ಮ ಓಟಿಗಾಗಿ ಮನಸ್ಸಿಗೆ ಬಂದ ಹಾಗೆ ಮಾತನಾಡುವುದು ಇದು ಸರಿಯಲ್ಲ. ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ದೇಶಕ್ಕೆ ಎಂತ ಕೊಡುಗೆ ಕೊಟ್ಟಿದ್ದಾರಂತೆ ನಿಮ್ಮ ಆತ್ಮಕ್ಕೆ ತಿಳಿದುಕೊಳ್ಳಿ.ನೀವು ಮಾತನಾಡುವಾಗ ಯಾವ ಪದಗಳನ್ನು ನೀವು ಬಳಸಬೇಕು ಈ ರೀತಿ ನಾಲಿಗೆ ಮೇಲೆ ಹಿಡಿತವಿಟ್ಟು ಮಾತನಾಡಿ ರಾಹುಲ್ ಗಾಂಧೀಜಿಯವರೇ. ಮನಸ್ಸಿಗೆ ಬಂದ ಹಾಗೆ ಮಾತನಾಡಿದರೆ ಮುಂದಿನ ದಿನಗಳಲ್ಲಿ ನಿಮ್ಮ ನೆಲೆಯು ಎಲ್ಲೂ ಕಾಣುವುದಿಲ್ಲ ಹಾಗಾಗಿ ಬಾಬಾ ಸಾಹೇಬ್ರಿಗೆ ಈ ರೀತಿಯಾಗಿ ಮಾತನಾಡಿರುವುದು ಸರಿಯಲ್ಲ ಕೂಡಲೇ ಕಡಿಮೆಯಾಚಿಸಬೇಕು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಒಂದು ಮಾತನ್ನು ಹೇಳುತ್ತಾರೆ. ಕಾಂಗ್ರೆಸ್ ಸುಡುವ ಮನೆ ದಲಿತರು ಅಲ್ಲಿಗೆ ಹೋಗಬೇಡಿ ನೀವು ಅಲ್ಲಿ ಹೋದರೆ ಸುಟ್ಟು ಹೋಗುತ್ತೀರಿ ಎಂದು ಮಾತು ನಿಜವಾಗುತ್ತದೆ ಅಂತ ಇವಾಗ ನಮಗೆ ಅರ್ಥವಾಗಿದೆ. ರಾಜಕೀಯ ಕೆಸರಾಟದಲ್ಲಿ ಬಾಬಾ ಸಾಹೇಬ ರವರ ಬಗ್ಗೆ ಹಗುರವಾಗಿ ಮಾತನಾಡಿದರೆ ನಾವು ಸುಮ್ಮನೆ ಕೂಡುವುದಿಲ್ಲ ಇದು ರಾಹುಲ್ ಗಾಂಧಿಯವರಿಗೆ ಎಚ್ಚರಿಕೆ ಸಂದೇಶವಾಗಿದೆ ಎಂದು ಮೋಹನ್ ರಾಜ್ ಕನ್ನಕೋಳೂರು ಪ್ರೊಫೆಸರ್ ಬಿ ಕೃಷ್ಣಪ್ಪ ಸ್ಥಾಪಿತ ಸಂಘಟನೆಯ ಯಾದಗಿರಿ ಜಿಲ್ಲಾ ಸಂಚಾಲಕರು ಮೋಹನ್ ರಾಜ್ ಪತ್ರಿಕೆಗೆ ತಿಳಿಸಿದ್ದಾರೆ.

# ಭೈರವಿ ಬನ್ನಿಮಹಾಂಕಾಳಿ ಗಣಪತಿ ದೇವಸ್ಥಾನದ16 ನೇ ವಾರ್ಷಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು:ನಗರದ 17 ನೇ ವಾರ್ಡಿನ ಲಕ್ಷ್ಮೀ ನಗರದಲ್ಲಿ ಇರುವ ಭೈರವಿ ಬನ್ನಿ ಮಹಾಂಕಾಳಿ ಗಣಪತಿ ದೇವಸ್ಥಾನ ಟ್ರಸ್ಟ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಅದ್ದೂರಿಯಾಗಿ ವಾರ್ಷಿಕೊತ್ಸವ ಜರುಗಿತು.ಬೆಳಿಗ್ಗೆ ಹೋಮ ಹವನ ವಿವಿಧ ಧಾರ್ಮಿಕ ಪೂಜೆಗಳು ನಡೆದವು. ಮಧ್ಯಾಹ್ನ 1:30 ರಿಂದ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಸಾರ್ವಜನಿಕರು ಮಹಿಳೆಯರು ಪಾಲ್ಗೊಂಡು ಸಾವಿರಾರು ಭಕ್ತರು ದರ್ಶನ ಪಡೆದು ಪುನಿತರಾದರು. ಕಾರ್ಯಕ್ರಮದಲ್ಲಿ ಭೈರವಿ ಬನ್ನಿ ಮಹಾಂಕಾಳಿ ಹಾಗೂ ಗಣಪತಿ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರು ಹಾಗೂ ಒಳ ಬಳ್ಳಾರಿ ಚನ್ನಬಸವೇಶ್ವರ ವಿಸಿಬಿ ಕಾಲೇಜ ನಿವೃತ್ತ ಪ್ರಾಂಶುಪಾಲರು.ಪ್ರೊ. ಡಾ.ಚಂದ್ರಶೇಖರ ಪಾಟೀಲ ( ಚಂಪಾ ) ಅವರ ನೇತೃತ್ವದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಈರಣ್ಣ ಗುರುಸ್ವಾಮಿ,ರಾಜು ಮಂಹೆದ್ರಕರ್, ವಿರೇಶ.ಚನ್ನಪ್ಪ,ಡಾ.ಶರಣಬಸವ ಚಂದ್ರಶೇಖರ ಪಾಟೀಲ್ , ವಾಗಿ,ಉದಯಕುಮಾರ, ಹನಮಂತ,ಸೂಗರೇಶ,ಶಾರದಾ ಸಿ ಪಾಟೀಲ್, ದೇವಸ್ಥಾನ ಭಕ್ತಾಧಿಗಳಾದ ರಾಜೇಶ ಮಾಣಿಕ್,ಸುನೀಲ ರಡ್ಡಿ,ಮುರಳಿ ರಡ್ಡಿ.ಎಬಿ ಪಾಟೀಲ,ಶಿವರಡ್ಡಿ,ಪ್ರದಿಪ್ ಗುತ್ತೆದಾರ,ಶಕುಂತಲಾ ಈರಣ್ಣ,ಹನಮಂತ ನಾಯಕ್ ತೊರಣದಿನ್ನಿ , ಭೈರವಿ ಬನ್ನಿ ಮಹಾಂಕಾಳಿ, ಗಣಪತಿ ದೇವಸ್ಥಾನದ ಟ್ರಸ್ಟ್ ಪದಾಧಿಕಾರಿಗಳು ಸಾರ್ವಜನಿಕರು ಭಾಗವಹಿಸಿದ್ದರು.

# ಸಾಂಸ್ಕೃತಿಕ ನಾಯಕ ಬಸವಣ್ಣ ಸಾಮಾಜಿಕ ಸಮಾನತೆಯ ಹರಿಕಾರ

ಹನ್ನೆರಡನೆಯ ಶತಮಾನದ ಆರಂಭದಲ್ಲಿಯೇ ಸಾಮಾಜಿಕ ಸಮಾನತೆಯ ಪರಿಕಲ್ಪನೆ ಕೊಟ್ಟು ನಾಡಿನ ಶರಣ ಚಳುವಳಿಯ ಹರಿಕಾರರಾಗಿ, ಸಾಮಾಜಿಕ ಹಾಗೂ ವೈಚಾರಿಕ ನೆಲೆಗಟ್ಟಿನ ಮೇಲೆ ಸಮ ಸಮಾಜವನ್ನು ಕಟ್ಟುವುದು ಮತ್ತು ವಚನ ಕ್ರಾಂತಿಯ ಮೂಲಕ ಸಮಾಜ ಸುಧಾರಣೆಯ ಸಂಕಲ್ಪವನ್ನು ಮಾಡಿದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು.

ಜಾತಿ, ಮತ, ಪಂಥಗಳ ಭೇದವನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾಮಾನವತಾವಾದಿ ಎಂದೂ ಕರೆಯಲಾಗುತ್ತದೆ. ಮಾನವಿಯತೆ, ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು. ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ ಎಂದು ಸಾರುವ ಮೂಲಕ ತಮ್ಮ ಮಾನವತಾವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿ, ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ನೀಡಿದ್ದಾರೆ.

ಜಗತ್ತಿನಲ್ಲಿ ಯಾವುದೇ ಸಂಘಟನೆ, ಸಂಸ್ಥೆ, ಆಡಳಿತ ವ್ಯವಸ್ಥೆ ಅಥವಾ ಚಳುವಳಿಯು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಲು ನಾಯಕ ಸ್ಥಾನದಲ್ಲಿರುವವರ ಪಾತ್ರ ಮುಖ್ಯ. ಬಸವಣ್ಣನವರು ಏಕವ್ಯಕ್ತಿ ನಾಯಕತ್ವವನ್ನು ಎಂದಿಗೂ ಪುರಸ್ಕರಿಸಲಿಲ್ಲ. ಬದಲಿಗೆ ಸಾಮೂಹಿಕ ನಾಯಕತ್ವಕ್ಕೆ ಚಾಲನೆ ನೀಡಿದರು. "ಯಾವ ಕಾರ್ಯ ನಾನು ಮಾಡುವೆನೋ ಅದೇ ಉದ್ದೇಶಕ್ಕಾಗಿ ನೀವೂ ಬಂದಿದ್ದೀರಿ. ನೀವು ಬಂದ ಕಾರ್ಯಕ್ಕಾಗಿಯೇ ನಾನೂ ಬಂದಿದ್ದೇನೆ, ಪ್ರಭುದೇವರೂ ನಮ್ಮೊಡನೆ ಸೇರಿಕೊಂಡಿದ್ದಾರೆ" ಎನ್ನುವ ಮೂಲಕ ಎಲ್ಲರನ್ನೂ ಸಮ ಸಮಾಜದ ನಿರ್ಮಾಣದ ಗುರಿಯತ್ತ ಜೊತೆಗೆ ಕರೆದೊಯ್ಯುತ್ತಾರೆ.

ಪ್ರತಿಯೊಬ್ಬರು ತಮ್ಮ ವೈಯಕ್ತಿಕ ಜೀವನದ ಜೊತೆಗೆ ಸಾಮಾಜಿಕ ಜೀವನದ ಸಮಾನತೆಯ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು. ಅವರ ವಚನಗಳ ನುಡಿಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಅಂ-ದಾಗ ನಮ್ಮಲ್ಲಿ ಸಮಾನತೆಯ ಮನೋಭಾವ ಬೆಳೆಯುತ್ತದೆ. ನಮ್ಮ ಸಾಮರಸ್ಯದ ಸೌಹಾರ್ದದ ಬದುಕಿಗೆ ವಚನ ಸಾಹಿತ್ಯದಲ್ಲಿರುವ ಈ ಮೌಲ್ಯಗಳು ಪೂರಕವಾಗಿವೆ. ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗಗಳಾಗಬೇಕಾಗಿದ್ದ ಈ ಮೌಲ್ಯಗಳು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ವಿಪರ್ಯಾಸಗಳಾಗಿ ಕಂಡುಬರುತ್ತಿರುವುದು ದುರಂತ. ಸಾಮಾಜಿಕ ನೀತಿಗಳನ್ನು, ಮೌಲ್ಯಗಳನ್ನು ಪಾಲಿಸದವರನ್ನು ಸಮಾಜ ನಿಕೃಷ್ಟವಾಗಿ ನೋಡುವಂತಾಗಬೇಕು. ಅಂದಾಗ ಬಸವಣ್ಣನವರು ಕಂಡ ಸಾಮಾಜಿಕ ಮೌಲ್ಯಗಳು ಜೀವಂತಿಕೆಯನ್ನು ಪಡೆಯುತ್ತವೆ.



ವ್ಯಕ್ತಿ-ವ್ಯಕ್ತಿಗಳ ನಡುವೆ ಕಂದಕ ಕಟ್ಟಿ ಅವರಲ್ಲಿಯೇ ವರ್ಗ, ವರ್ಣ, ಲಿಂಗ ವೈಷಮ್ಯಗಳನ್ನು ಕಲ್ಪಿಸಿ, ಅಸಮಾನ ಸಮಾಜ ನಿರ್ಮಾಣದ ಕುಕೃತ್ಯಗಳು ಜಗತ್ತಿನಲ್ಲಿ ಕಾಲಕಾಲಕ್ಕೆ ನಡೆಯುತ್ತ ಬಂದಿವೆ, ಆದರೆ ಬಸವಣ್ಣನವರು ತಮ್ಮ ಶರಣ ಚಳುವಳಿಯ ಮೂಲಕ ಇವುಗಳ ವಿರುದ್ಧ ಹೋರಾಡಿ ಸಾಮಾಜಿಕ ಸಮಾನತೆಗಾಗಿ ದುಡಿದವರು. ಪ್ರಾಣಿಗಳನ್ನು ಮೈಮೇಲಿಟ್ಟುಕೊಂಡು ಮುದ್ದಾಡಿ ಆನಂದಿಸುವ ಇವತ್ತಿನ ಮನುಷ್ಯ ತನ್ನಂತೆ ಇರುವ ಮನುಷ್ಯನನ್ನು ಮುಟ್ಟುವುದರಿಂದ ಮೈಲಿಗೆಯಾಗುವುದಂದರೇನು? ಅಪವಿತ್ರವೆನ್ನುವುದೇನು? ಇದು ಮಾನವೀಯತೆಯೇ? ಇದು ಸಮಾನತೆಯೇ? ನನ್ನ ಹೃದಯ ನಿನ್ನ ಹೃದಯ ಇತರರ ಹೃದಯಗಳೆಲ್ಲವು ಒಂದೇ! ಅವರಲ್ಲಿರುವ ಅಂತರಾತ್ಮವು ಒಂದೇ ಆಗಿರುವಾಗ ಭಿನ್ನತೆ ಏಕೆ? ಹುಟ್ಟಿನಿಂದಲೇ ಜಾತಿಯ ಹಣೆ ಪಟ್ಟಿಯನ್ನು ಹಚ್ಚಿ ವ್ಯಕ್ತಿಗಳನ್ನು ಪ್ರಾಣಿಗಿಂತ ಕೀಳಾಗಿ ಕಾಣುವ ಕುಟೀಲ ಕುತಂತ್ರತೆಯನ್ನರಿತ ಬಸವಣ್ಣನವರ ಹೃದಯ ಮಮ್ಮಲ ಮರುಗಿ ಅವರಿಗಾಗಿ ಅವರ ಜೀವನದ ಏಳ್ಗೆಗಾಗಿ ಹಗಲಿರುಳು ಹಂಬಲಿಸಿ ಅಪ್ಪಿ ಒಪ್ಪಿಕೊಂಡು ದಲಿತರ ಧ್ವನಿಯಾಗಿ ಅವರ ಸಾಮಾಜಿಕ ಸಮಾನತೆಯ ಸ್ಥಾನಮಾನ ಪಡೆಯಲು ಶ್ರಮಿಸಿದವರು ವಿಶ್ವಗುರು ಬಸವಣ್ಣನವರು.

ದೇವ ನಿರ್ಮಿತ ಗಾಳಿ, ಬೆಳಕು, ಆಕಾಶ, ಭೂಮಿ, ನೀರು, ಇವುಗಳಿಗಿಲ್ಲದ ಕುಲದ ಪ್ರಶ್ನೆ ಮಾನವನಲ್ಲೇಕೆ? ತನ್ನ ತಾನರಿಯದವನಿಗೆ ಕುಲವು ಒಂದೆ ಅವನ ನಿಲುವು ಒಂದೆ. ಅಂದರೆ ಸಮಾಜದ ಸರ್ವರು ಸಮಾನರು ಎಂದು ಬಸವಣ್ಣನವರ ಅಭಿಮತವಾಗಿದೆ. ಆವ ಕುಲವಾದೊಡೇನು? ಲಿಂಗವಿದ್ದವನೆ ಕುಲಜ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವವರೆಲ್ಲರೂ ಕುಲಜರು, ಶರಣರು ಎಂದು ಬಸವಣ್ಣನವರ ಸಮಾನತೆಯ ಉದಾತ್ತ ಧ್ಯೇಯವಾಗಿತ್ತು.

ಸಾಮಾಜಿಕ ಬದುಕಿನಲ್ಲಿ ಅಸ್ಪೃಶ್ಯರಂತೆ ಶೋಷಣೆಗೆ ಒಳಗಾದ ಇನ್ನೊಂದು ವರ್ಗ ಮಹಿಳಾ ಸಂಕುಲ. ಮಾತೃದೇವೋಭವ ಎಂದು ನಮ್ಮ ಪರಂಪರೆಯಲ್ಲಿ ಹೆತ್ತ ತಾಯಿಯನ್ನು ದೇವರೆಂದು ಪರಿಗಣಿಸಿದರೆ, ಪರರ ಮನೆಯ ಹೆಣ್ಣು ಮಗಳನ್ನು ತಾಯಿಯಾಗಿ ಕಂಡು ಪೂಜಿಸುವ ದಿವ್ಯದೃಷ್ಠಿ ಬಸವಣ್ಣನವರದು. ಮಹಿಳೆಯರು ಸಂಸ್ಕಾರದಿಂದ, ಅವಕಾಶಗಳಿಂದ ವಚನ ಸಾಹಿತ್ಯ ಕೃಷಿ ಮಾಡಿದ್ದು ಹೆಮ್ಮೆಯ ವಿಷಯ. ಸೂಳೆ ಸಂಕವ್ವೆ, ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಅಕ್ಕಮ್ಮ, ನೀಲಾಂಬಿಕೆ ಅಕ್ಕನಾಗಮ್ಮ ಕಾಳವ್ವನಂತಹ ವಚನಕಾರ್ತಿಯರು ಆತ್ಮೋದ್ಧಾರದ ಜೊತೆಗೆ ಸಮಾಜ ಸೇವೆಗಾಗಿ ದುಡಿದವರು. ಇವರಲ್ಲರಿಗೂ ವಿಶ್ವಗುರು ಬಸವಣ್ಣನವರ ಸಮಾಜೋದ್ಧಾರದ ನಿಲುವು ಪ್ರೇರಣೆಯಾಗಿತ್ತು.

ಗುಡಿಗುಂಡಾರಗಳಿಗೆ ಅಲೆದು ಹಣ ಗುಣ ಸಮಯವನ್ನು ಕಳೆದುಕೊಳ್ಳದೇ, ದೇಹವನ್ನೇ ದೇವಾಲಯವಾಗಿ ಮಾಡಿದ ಮಹಾಮಾನವತಾವಾದಿ ಬಸವಣ್ಣನವರು. ಇವರು ನೀಡಿದ ಕರೆ ಶೋಷಣೆ ತಪ್ಪಿಸುವುದು, ವಂಚನೆಯನ್ನು ತಡೆಯುವುದರ ಮೂಲಕ ಸಮಾಜೋದ್ಧಾರಕ್ಕಾಗಿ ಹಂಬಲಿಸಿದ್ದರು. ಹಲವು ದೈವಗಳ ಎಂಜಲ ತಿಂದು ವಂಚಕರ ಜಾಲದಲ್ಲಿ ಸಿಕ್ಕು ಬಳಲದೆ ದೇವನ ಅನುಭೂತಿ ತನ್ನ ತಾ ತಿಳಿಯುವುದರಲ್ಲಿ ಇದೆ ಎಂದು ಮನವರಿಕೆ ಮಾಡಿಸಿದ್ದಾರೆ.

ಬಸವಣ್ಣನವರು ದೇವರು ಮತ್ತು ಧರ್ಮವೆಂದರೆ ಇದ್ದವರ (ಉಳ್ಳವರ) ಧರ್ಮವಲ್ಲ. ಕಾಯಕ ಜೀವಿಗಳ ಧರ್ಮ, ಪತೀತರನ್ನು ಪಾವನಗೊಳಿಸುವ ಧರ್ಮವಾಗಿದೆ. ಸನಾತನ ಸಂಪ್ರದಾಯ ಶೋಷಿಸುವ ಧರ್ಮದ ಬದಲಾಗಿ ಸಕಲರನ್ನು ಸಮಾನತೆಯಿಂದ ಪೋಷಿಸುವ ಪೂಜಿಸುವ ಹೊಸ ಧರ್ಮವನ್ನು ಸಮಾಜಕ್ಕೆ ನೀಡಿದವರು ಬಸವಣ್ಣನವರು. ಸಮಾನತೆಯ ಸಮಾಜವೊಂದರ ನಿರ್ಮಾಣದ ಉದ್ಧಾರಕ್ಕೆ ಕಂಕಣ ಬದ್ಧರಾಗಿ ಬಸವಣ್ಣನವರು ಮೂಢನಂಬಿಕೆಗಳ ಬೇರನ್ನು ಕಿತ್ತು, ಸಾಮಾಜದಲ್ಲಿ ವೈಚಾರಿಕತೆಯನ್ನುನ ಬಿತ್ತಿದರು.

ಸಾಮಾಜಿಕ ಬದುಕಿನಲ್ಲಿ ನಮ್ಮ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಮನದ ಬಯಕೆಗಳನ್ನು ಈಡೇರಿಸಿಕೊಳ್ಳಲು ಕಂಡ ಕಂಡ ಒಣಗುವ ಮರವ, ಬತ್ತುವ ನೀರನ್ನು ದೇವರೆಂದು ನಂಬಿ ಅವುಗಳಿಗೆ ಶರಣಾಗಿ ಮಾರು ಹೋಗುವ ಮೌಢ್ಯತೆಯನ್ನು ಅಲ್ಲಗಳೆಯುತ್ತ ನಮ್ಮ ನಮ್ಮ ಕಾಯಕಗಳ ಮೂಲಕ ವೈಚಾರಿಕ ಬದುಕನ್ನು ಕಟ್ಟಿಕೊಳ್ಳಬೇಕೆಂದು ಅಂ-ದಾಗ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸಾಧ್ಯವಾಗುವುದೆಂದು ಹೇಳಿದ್ದಾರೆ.

ವ್ಯಕ್ತಿ ಮತ್ತು ಸಮಾಜ ಇವೆರಡರ ವಿಕಾಸದಿಂದ ಪರಿಪೂರ್ಣವಾದ ಸಮಾಜ ಸಾಧ್ಯವೆಂದು ಅರಿತ ಬಸವಣ್ಣನವರು ವಿಷಮ ಸಮಾಜಕ್ಕೆ ಮತ್ತು ಅಸಮಾನತೆಗೆ ಕಾರಣವಾದ ಜಾತೀಯತೆ, ಅಸ್ಪೃಶ್ಯತೆ, ಅಂಧಶ್ರದ್ಧೆ, ಅನಾಚಾರ ದುರಾಚಾರಗಳನ್ನು ತಳ್ಳಿಹಾಕಿ, ಸ್ವಾತಂತ್ರ್ಯ, ಬಂಧುತ್ವ, ಮಾನವೀಯತೆ, ಸಹಬಾಳ್ವೆ, ಸಹಕಾರ, ಸಜ್ಜನಿಕೆ, ಜಾತ್ಯಾತೀತ ಸಮಾನತೆಯ ಮೇಲೆ ಸುಂದರ ಸಮಾನತೆಯ ಸಮಾಜವನ್ನು ನಿರ್ಮಿಸಿದ್ದ ಬಸವಣ್ಣನವರು. ಅದಕ್ಕೆ ಅವರಿಗೆ ಸಮಾಜ ಚಿಂತಕ, ಸಮಾಜ ಚಿಕಿತ್ಸಕ, ವಿಶ್ವಗುರು, ಜಗಜ್ಯೋತಿ, ಮಹಾಮಾನವತಾವಾದಿ ಎಂಬ ಬಿರುದಾಂಕಿತ ಹೊಂದಿ ಸಮಾಜ ಸುಧಾರಕ ಬಸವಣ್ಣನವರಾದರು. ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕಿ ಸದ್ವಿನಯ ಸದಾಚಾರಗಳನ್ನು ಅಳವಡಿಸಿಕೊಂಡು, ಸದಾ ಶಿವನ ಒಲುಮೆಗೆ ಸೋಪಾನ ನಿರ್ಮಿಸಿದರು.

ಅರಿವು-ಅನುಭಾವ ಪ್ರಧಾನವಾದ ಸಾಮಾಜದಲ್ಲಿ ವ್ಯಕ್ತಿ ತಾನು ಬದುಕಿ ಇತರರನ್ನು ಸಮಾನತೆಯಾಗಿ ಕಾಣಬೇಕು, ಬದುಕಿಸಬೇಕು, ಗೌರವಿಸಬೇಕು, ಶರಣರಾದವರು ಭಕ್ತರಾದವರು ಕಿರುಕುಳ ದೈವಗಳನ್ನು ತ್ಯಜಿಸಿ, ಅಂಧ ಶ್ರದ್ಧೆ-ಅನಾಚಾರಗಳನ್ನು ತೊಡೆದು ಹಾಕಿ, ಸತ್ಯ ಶುದ್ಧ ಕಾಯಕದಿಂದ ಕೂಡಿದ ಸ್ವಾವಲಂಬಿ ಜೀವನ ನಡೆಸುವ ಸಮಾನತೆಯ ಸಮಾಜವು ನಿರ್ಮಾಣವಾಗಬೇಕು. ಅಂದಾಗ ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ಹೇಳಿದರು. ಸಕಲ ಜೀವಾತ್ಮರಿಗೆ ಲೇಸ ಬಯಸುವ ಶರಣ ಸಮೂಹದ ಸಮಾಜವನ್ನು ಕಟ್ಟಬೇಕು ಎಂದು ತಿಳಿಸಿದರು.

ಶರಣರೆಲ್ಲರೂ ಅವರವರ ಅನುಭಾವದ ನೆಲೆಯಲ್ಲಿ ನಿಂತು ಮಾತನಾಡುತ್ತಿದ್ದರು. ನಡೆಯಲು ಸಾಧ್ಯವಾದುದನ್ನು ನುಡಿಯುತ್ತಿದ್ದರು. ಅವರ ನಡೆ-ನುಡಿಗಳು ಆತ್ಮಸಾಕ್ಷಿಗನುಗುಣವಾಗಿದ್ದವು. ಬೂಟಾಟಿಕೆಗಾಗಲಿ, ಬಡಾಯಿಗಾಗಲಿ ಅಲ್ಲಿ ಜಾಗವೇ ಇರಲಿಲ್ಲ. ಅನುಭವ ಪ್ರಾಮಾಣ್ಯಕ್ಕೆ ಮಾತ್ರ ಅಲ್ಲಿ ನೆಲೆ, ಬೆಲೆ. ಹೀಗಾಗಿ ಒಬ್ಬರ ಮಾತನ್ನು ಮತ್ತೊಬ್ಬರು ಶ್ರದ್ಧೆ ಹಾಗೂ ಧನ್ಯತೆಯ ಭಾವದಿಂದ ಕೇಳುತ್ತಿದ್ದರು. ಏಕೆ-ಂದರೆ ಅವರ ಮಾತಿನಲ್ಲಿ ಅರಿವಿನ ಬೆಳಕು ಇರುತ್ತಿತ್ತು. ಇದೆಲ್ಲದರ ಪರಿಣಾಮವೆಂಬಂತೆ ಹಲವಾರು ವೈಚಾರಿಕ, ದಾರ್ಶನಿಕ, ಭಾವಧಾರೆಗಳು ಸೇರಿಕೊಂಡು ಶರಣರ ಅನುಭಾವ ಧಾರೆ ನಿರ್ಮಾಣವಾಯಿತು. ಸಾಮಾಜಿಕ ಬದುಕಿನ ಪ್ರತಿಯೊಂದು ಅಂಶಗಳನ್ನು ಅರಿತು, ಶೋಧಿಸಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿ, ಪಾಲಿಸಿ, ಸಾಂಸ್ಕೃತಿಕತೆ ಉತ್ಕೃಷ್ಟ ಪರಂಪರೆಯ ಪರಮೋಚ್ಚ ಆದರ್ಶಗಳ ಹರಿಕಾರರಾದ ವಿಶ್ವಗುರು ಬಸವಣ್ಣನವರು ಸಾಮಾಜಿಕ ಸಮಾನತೆಯ ಮಹಾನುಭಾವರೆಂದೆನಿಸಿದ್ದಾರೆ.



ಡಾ.ಚಂದ್ರಶೇಖರ.
ಎಂ.ಕಾಳನ್ನವರ
ಅತಿಥಿ ಉಪನ್ಯಾಸಕರು
ಸರಕಾರಿ ಪ್ರಥಮ ದರ್ಜೆ
ಕಾಲೇಜು ಬಾಗಲಕೋಟೆ.

## ಸತ್ಯ, ಶುದ್ಧ ಕಾಯಕದಿಂದ ಮಾತ್ರ ಸಮಾಜ ಪರಿಶುದ್ಧ : ಡಾ.ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.30-ಸತ್ಯಶುದ್ಧ ಕಾಯಕ ನಿಷ್ಠೆಯಿಂದ ಮಾತ್ರ ಸಮಾಜದ ಪರಿಶುದ್ಧತೆ ಸಾಧ್ಯವೆಂಬ ಶರಣ ಚಿಂತನೆಯನ್ನು ಜಗತ್ತಿಗೆ ನೀಡಿದವರು ಕಾಯಕಯೋಗಿ ಬಸವಣ್ಣನವರು ಎಂದು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಹೇಳಿದರು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಅಖಿಲ ಭಾರತ ವೀರಶೈವ ಮಹಾಸಭಾ, ಶರಣ ಸಾಹಿತ್ಯ ಪರಿಷತ್ತು, ಶಿವಾನುಭವ ಸಮಿತಿ, ಕಣವಿ ಟ್ರಸ್ಟ್, ಬಿವಿವಿ ಅಕ್ಕನ ಬಳಗ, ಕದಳಿ ವೇದಿಕೆಗಳ ಸಹಯೋಗದಲ್ಲಿ ಬುಧವಾರ ಜರುಗಿದ ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದು ಜಾಗತಿಕವಾಗಿ ಪ್ರತಿಯೊಂದು ದೇಶಗಳು ವಿಚಿತ್ರ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ, ಅವೆಲ್ಲವೂ ಪರಿಹಾರಗಳಿಗಾಗಿ ತಾಕಲಾಡುತ್ತಿವೆ. ಆದರೆ ಭಾರತ ಮಾತ್ರ ಅಂತಹ ಎಲ್ಲ ಬಗೆಯ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಬಸವಣ್ಣವರಂತಹ ಮಹಾಶಿವಶರಣರು ನೀಡಿ ಈಗ ಜಗತ್ತಿಗೆ ಭಾರತವೇ ವಿಶ್ವಗುರು ಎಂಬುದು ಸಾಬೀತಾಗಿದೆ ಎಂದು ಚರಂತಿಮಠ ಹೇಳಿದರು.

ಕಾರ್ಯಕ್ರಮಕ್ಕೂ ಮೊದಲು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕೇಂದ್ರ ಕಛೇರಿಯಲ್ಲಿ ಬಸವಣ್ಣನವರ ವಚನ ಸಂಪುಟಗಳನ್ನು ಪಲ್ಲಕ್ಕಿಯಲ್ಲಿ ಇಟ್ಟು ಪೂಜೆ ಸಲ್ಲಿಸಿ, ಬೀಳೂರ ಗುರುಬಸವ ಮಹಾಸ್ವಾಮಿಗಳ ದೇವಸ್ಥಾನಿಂದ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆ ಕಾಲೇಜು ರಸ್ತೆ, ಬಸವೇಶ್ವರ ವೃತ್ತ, ಸ್ಟೇಷನ್ ರಸ್ತೆ ಮೂಲಕ ವಲ್ಲಭಭಾಯಿ ಚೌಕ, ಅಡತಬಜಾರ, ಟೀಕಿನ ಚರಂತಿಮಠದ ಬೀಳೂರ ಅಜ್ಜನ ದೇವಸ್ಥಾನಕ್ಕೆ ಆಗಮಿಸಿ ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ 25 ಕ್ಕೂ ಹೆಚ್ಚು ಜೋಡಿ ಎತ್ತುಗಳು, ಬಸವಣ್ಣವರ ಭಾವ ಚಿತ್ರ, ಕುದುರೆ ಮೇಲೆ ಕುಳಿತ ಬಸವಣ್ಣ ವೇಷದಾರಿ ಜನರ ಗಮನ ಸೆಳೆದವು.

ಗುಳೇದಗುಡ್ಡ ಮುರಘಾಮಠದ ಕಾಶಿನಾಥ ಮಹಾಸ್ವಾಮಿಗಳು, ಸಂಘದ ಗೌರವ ಕಾರ್ಯಧರ್ಶಿ ಮಹೇಶ ಅಥಣಿ, ಎಸ್.ಎಸ್.ಪಾವಟೆ, ರಾಜು ತಪಶೆಟ್ಟಿ, ಬಸವರಾಜ ಮುಕ್ಕುಪ್ಪಿ, ವಿಜಯಕುಮಾರ ಅಂಗಡಿ, ಅಶೋಕ ಸಜ್ಜನ(ಬೇವೂರ), ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ., ಶಿವಲಿಂಗಪ್ಪ ಮೊರಬದ, ಪಂಡಿತ ಅರಬ್ಬಿ, ರುದ್ರ ಅಕ್ಕಿಮರಡಿ, ಮಹೇಶ ಅಂಗಡಿ, ವೀರಣ್ಣ ಹಲಕುರ್ಕಿ, ಗಂಗಾಧರ ನರೆಗಲ್, ಕುಮಾರ ಜಿಗಜಿನ್ನಿ, ಮಲ್ಲಿಕಾರ್ಜುನ ಸಾಸನೂರ, ಪ್ರಕಾಶ ರೇವಡಿಗಾರ, ಶರಣಪ್ಪ ಗುಳೇದ, ಅಶೋಕ ರೇವಣಕೋಪ್ಪ, ರಾಜು ಪಲ್ಲೇದ, ಸಿದ್ದರಾಮ ಮನಹಳ್ಳಿ, ಕುಮಾರಸ್ವಾಮಿ ಹಿರೇಮಠ, ಸಂಘದ ಆಡಳಿತಾಧಿಕಾರಿಗಳಾದ ವಿ.ಆರ್.ಶಿರೋಳ, ಡಾ.ವಿಜಯಕುಮಾರ ಕಟಗಿಹಳ್ಳಿಮಠ ಮತ್ತಿತರರು ಇದ್ದರು.

## ವಿದ್ಯಾರ್ಥಿಗಳು ತಂತ್ರಜ್ಞಾನದ ಕೌಶಲ್ಯ ಬೆಳೆಸಿಕೊಳ್ಳಬೇಕು : ಕರಿಬಾಶೆಟ್ಟಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.30-ಪದವಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆ-ಗೆ ತಂತ್ರಜ್ಞಾನದ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ತಂತ್ರಜ್ಞಾನದ ಕೌಶಲ್ಯವು ಉನ್ನತ ವ್ಯಾಸಂಗ ಮಾಡಲು ಹಾಗೂ ಸಂಶೋಧನಗೆ ಬೇಕಾದ ಮಾಹಿತಿ ಸಂಗ್ರಹಿಸಲು ಅನುಕೂಲವಾಗುತ್ತದೆ ಎಂದು ರವಿ ಕರಿಬಾಶೆಟ್ಟಿ ಹೇಳಿದರು.




ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕಂಪ್ಯೂಟರ್ ವಿಭಾಗದ ಆಶ್ರಯದಲ್ಲಿ ಮಂಗಳವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಕೌಶಲ್ಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು,

ವಿದ್ಯಾರ್ಥಿಗಳು ಅಂತರ್ಜಾಲದಲ್ಲಿ ಮಾಹಿತಿ ವಿಶ್ಲೇಷಣೆ ಮತ್ತು ಸಂಸ್ಕರಿಸುವುದನ್ನು ಕಲಿಯಬೇಕು. ಬೇರೆ ಬೇರೆ ಪ್ರದೇಶಗಳಲ್ಲಿರುವ ವಿಷಯವನ್ನು ಸುಲಭವಾಗಿ ಪಡೆದುಕೊಳ್ಳಬೇಕಾದರೆ ತಂತ್ರಜ್ಞಾನದ ಕೌಶಲ್ಯ ತಿಳಿದಿರಬೇಕು. ತಮ್ಮ ಅಧ್ಯಯನಕ್ಕೆ ಪೂರಕವಾದ ಕೆಲವು ಪ್ರಮುಖ ಪಠ್ಯಗಳನ್ನು ಬೇರೆ ಬೇರೆ ಗ್ರಂಥಾಲಯದಲ್ಲಿ ಲಭ್ಯ ಇದ್ದರೆ ಅವುಗಳನ್ನು ಸಹ ತಂತ್ರಜ್ಞಾನದ ಕೌಶಲ್ಯದ ಮೂಲಕ ಬಳಸಿಕೊಂಡು ಸಂವಹನ ಮಾಡಿಕೊಂಡರೆ ಅಧ್ಯಯನದಲ್ಲಿ ಹೊಸ ಆಯಾಮ ದೊರೆಯುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಮಾತನಾಡಿ, 21ನೇ ಶತಮಾನದಲ್ಲಿ ತಂತ್ರಜ್ಞಾನವು ವ್ಯಾಪಕವಾಗಿ ಬೆಳೆದಿದ್ದು, ಅದರ ಸದುಪಯೋಗವನ್ನು ಇಂದಿನ ವಿದ್ಯಾರ್ಥಿಗಳು ಪಡೆದುಕೊಂಡು, ಮಾಹಿತಿ ಸಂವಹನ ತಂತ್ರಜ್ಞಾನ ಕೌಶಲ್ಯದ ಮೂಲಕ ಬೇರೆ ಬೇರೆ ಕ್ಷೇತ್ರಗಳಲ್ಲಿ ದೊರೆಯುವ ಸಂಪನ್ಮೂಲಗಳನ್ನು, ವಿಷಯಗಳನ್ನು ಸಂಗ್ರಹಿಸಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ತಂತ್ರಜ್ಞಾನ ಕೌಶಲ್ಯ ಬಳಕೆ ಮಾಡಿಕೊಂಡರೆ ಉದ್ಯೋಗ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಸವಿತಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಸ್ನೇಹ ಕಾಳೆ ಸ್ವಾಗತಿಸಿದರು. ಪ್ರೊ.ಸಾಗರ ಚಿಂಗಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾನಂದಾ ಯಮನಾಳ, ಶಿಲ್ಪಾ ಹುಲಸದ ನಿರೂಪಿಸಿದರು. ಪ್ರಸನ್ನ ಕರವೀರಮಠ ವಂದಿಸಿದರು.

## ಬಾಲಕ ಕಾಣೆ ಪತ್ತೆಗೆ ಸಹಕರಿಸಲು ಮನವಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕಜಂತಕಲ್ ಗ್ರಾಮದ ವಿನೋಭಾ ನಗರ ಖಾಜಾ ಹುಸೇನ್ ತಂದೆ ಉಸ್ಮನಸಾಬ ಕಂಪ್ಲಿ ಎಂಬ 16 ವರ್ಷದ ಬಾಲಕ ಕಾಣೆಯಾಗಿದ್ದು, ಪತ್ತೆಗೆ ಸಹಕರಿಸುವಂತೆ ಗದಗ ನಗರ ರೈಲ್ವೆ ಪೊಲೀಸ ಠಾಣೆಯ ಠಾಣಾಧಿಕಾರಿ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಬಾಲಕ ಏಪ್ರಿಲ್ 11 ರಂದು ಅಣ್ಣಿಗೇರಿ ರೇಲ್ವೆ ನಿಲ್ದಾಣದಿಂದ ಕಾಣೆಯಾಗಿದ್ದು, ಅವರ ಮಾವ ಗಂಗಾವತಿ ರೈಲು ನಿಲ್ದಾಣದಿಂದ ಸಿಂಧನೂರ ಎಕ್ಸಪ್ರೆಸ್ ರೈಲನ್ನು ಹತ್ತಿಸಿ ಹುಬ್ಬಳಿಯ ಮದರಸಾಗೆ ಕಳುಹಿಸಿಕೊಟ್ಟಿದ್ದು, ಬಾಲಕ ಮದರಸಾಗೆ ಹೋಗದೆ ಅಣ್ಣಿಗೇರಿ ರೈಲ್ವೆ ನಿಲ್ದಾಣದಿಂದ ಕಾಣೆಯಾಗಿದ್ದಾನೆ ಎಂದು ಬಾಲಕನ ಅಣ್ಣ ಮಹಮ್ಮದ್ ರಫೀಕ ಉಸ್ಮಾನಸಾಬ ದೂರು ನೀಡಿದ್ದು, ಗದಗ ನಗರ ರೈಲ್ವೆ ಪೊಲೀಸ್ ಠಾಣೆಯ ಗುನ್ನೆ ನಂ: 07/2025 ಕಲಂ 137(2) ಬಿ.ಎನ್.ಎಸ್ 2023 ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಬಾಲಕನ ವಿವರ: ಕಾಣೆಯಾದ ಬಾಲಕ 5 ಪೂಟ್ ಎತ್ತರ, ಗೋದಿ ಗೆಂಪು ಮೈ ಬಣ್ಣ, ಕೊಲು ಮುಖ, ನೀಟಾದ ಮೂಗು, ತಲೆಯಲ್ಲಿ ಕಪ್ಪು ಕೂದಲು. ಕಾಣೆಯಾದಾಗ ಬಿಳಿ ಬಣ್ಣದ ಜುಬ್ಬಾ ಧರಿಸಿದ್ದು, ಕನ್ನಡ, ಮತ್ತು ಹಿಂದಿ ಭಾಷೆ ಓದಲು ಬರೆಯಲು ಬರುತ್ತದೆ.

ಈ ಬಾಲಕ ಯಾರಿಗಾದರೂ ಕಂಡಲ್ಲಿ ಅಥವಾ ಮಾಹಿತಿ ದೊರೆತಲ್ಲಿ ಒಂದು ವೇಳೆ ಬಾಲಕ ಮೃತ ದೇಹ ಪತ್ತೆ ಆದಲ್ಲಿ ಗದಗ ರೈಲ್ವೇ ಪೊಲೀಸ್ ಠಾಣೆಯ ದೂರವಾಣಿ ನಂ: 08372-278744 ಅಥವಾ ಮೊ.ನಂ: 9480802128 ಇ-ಮೇಲ್ gadagrly@ksp.gov.in ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080- 22871291 ಮಾಹಿತಿ ನೀಡುವಂತೆ ಪ್ರಕಟಣೆ ತಿಳಿಸಿದೆ.

## ಬಸವಣ್ಣ ವಿಶ್ವದ ವಿಭೂತಿ ಪುರುಷ, ಭಾರತದ ಭಾಗ್ಯ: ಅಸ್ಪಾಕ್

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ಏ.30-ಬಸವಣ್ಣ ವಿಶ್ವದ ವಿಭೂತಿ ಪುರುಷ, ಭಾರತದ ಭಾಗ್ಯ, ಜಗದ ಶಕ್ತಿ ಎಂದು ಕೆಪಿಸಿಸಿ ಬೀದಿ ಬದಿ ವ್ಯಾಪಾರಿಗಳ ವಿಭಾಗದ ತಾಲೂಕ ಬ್ಲಾಕ್ ಅಧ್ಯಕ್ಷ ಅಸ್ಪಾಕ್ ಅಹಮದ್ ರವರು ಪಟ್ಟಣದ ಬಸವಣ್ಣನವರ ಜಯಂತ್ಯೋತ್ಸವದ ನಿಮಿತ್ತ ಬಸವಣ್ಣನವರ ಭಾವಚಿತ್ರಕ್ಕೆ ಮಾರ್ಲಾಪಣೆ ಮಾಡಿ ಮಾತನಾಡುತ್ತಾ ನುಡಿದರು. ಬಸವಣ್ಣನ ಜಯಂತಿ ಆಚರಿಸುವುದು ಅಂದರೆ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಗೌರವ ಸಲ್ಲಿಸಿದಂತೆ ಕಂದಾಚಾರ ಮೂಢನಂಬಿಕೆಗಳಿಗೆ ತಿಲಾಂಜಲಿ ಇಟ್ಟು, ಮಾನವ ನಿರ್ಮಿತ ಜಾತಿ ವ್ಯವಸ್ಥೆಯನ್ನು ಕಿತ್ತೊಗೆದು ಮಹಾನ್ ಕ್ರಾಂತಿ ಮಾಡಿದ ಬಸವಣ್ಣ ಲೋಕ ಪೂಜಿತ ಎಂದರು. ಬಸವಣ್ಣ ಆದಿಯಾಗಿ ಎಲ್ಲ ಶರಣರು ಬರೆದ ವಚನಗಳು ಮನುಷ್ಯನ ಸನ್ಮಾರ್ಗಕ್ಕೆ ದಾರಿ ದೀಪಗಳಾಗಿವೆ ಎಂದರು. ಗ್ರಾಮೀಣ ಅಧ್ಯಕ್ಷ ವಿಲಾಸ್ ಮೇತ್ರೆ ಮಾತನಾಡಿ,




ಹೆಗಲ ಮೇಲೆ ಭುಜದ ಮೇಲೆ ಕುಳಿತವರು ಇಳಿಯಬಹುದು. ಆದರೆ ಹೃದಯದಲ್ಲಿ ಕುಳಿತ ಬಸವಣ್ಣ ನಿರಂತರ ಜ್ಯೋತಿ ಇದ್ದಂತೆ ಎಂದರು. ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪಾಲಿಸುವ ಮೂಲಕ ಸಮಾನತೆಯ ಸಮಾಜ ಕಟ್ಟುವ ಕೆಲಸ ಆಗಬೇಕು ಎಂದರು. ಬಸವಣ್ಣನವರ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಮೈಗೊಡಿಸಿಕೊಳ್ಳಬೇಕೆಂದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಧಾಕರ್ ಭಾಸ್ಕರ್. ಅಝುರ್. ವಿದ್ಯಾಸಾಗರ್ ಸಾಧನೂರ್ ಪಾಂಡುರಂಗ ಸಾಗರ್. ಅಲ್ತಾಫ್. ಮಸ್ತಾನ್. ಫಿರೋಜ್. ರಾಘು. ಮುಜ್ಜು. ಆಹೆಮದ್. ಹಾಗೂ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕರ್ತವ್ಯನಿರತ ಹೆಡ್ ಕಾನ್ಸ್ಟೇಬಲ್ ಹೃದಯಾಘಾತಕ್ಕೆ ಬಲಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು,ಏ.27-ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಪ್ರಕರಣಗಳು ದಿನೇ ದಿನೇ ಯಾವುದೇ ವಯಸ್ಸಿನ ಮಿತಿಯಿಲ್ಲದೇ ಹೆಚ್ಚಾಗುತ್ತಲೇ ಇವೆ. ಹಲವಾರು ಪ್ರಕರಣಗಳಲ್ಲಿ ಬಸ್ ಕಂಡಕ್ಟರ್, ಡ್ರೈವರ್, ಇತರ ಅಧಿಕಾರಿಗಳು, ಜಿಮ್ ನಲ್ಲಿ ವ್ಯಾಯಾಮ ಮಾಡುವ ಯುವಕರು, ಮದುವೆ ಮನೆಯಲ್ಲಿ ವರ-ವಧು ಈ ಹಠಾತ್ ಹೃದಯಾಘಾತಕ್ಕೆ ಬಲಿಯಾಗಿದ್ದಾರೆ.

ಇದೀಗ ಚಾಮರಾಜನಗರ ಜಿಲ್ಲೆಯಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಕಾನ್ಸ್‌ಸ್ಟೆಬಲ್ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ನಡೆದಿದೆ.



ಮೃತ ವ್ಯಕ್ತಿಯನ್ನು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಅಲಬಾವಿ ಗ್ರಾಮದ ಪರಶುರಾಮ್ (31) ಎಂದು ಗುರುತಿಸಲಾಗಿದೆ. ಪರಶುರಾಮ್ ಕಳೆದ ಮೂರು ವರ್ಷಗಳಿಂದ ಹನೂರು ತಾಲೂಕಿನ ರಾಂಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಸ್.ಬಿ ಕಳೆದ ಮೂರು ತಿಂಗಳಿನಿಂದ ಕರ್ತವ್ಯದಲ್ಲಿದ್ದರು ಎನ್ನಲಾಗಿದೆ.

ಬೆಳಿಗ್ಗೆ ಕರ್ತವ್ಯದಲ್ಲಿದ್ದಾಗ ಅವರಿಗೆ ಹೃದಯಾಘಾತವಾಗಿದೆ. ಸಹೋದ್ಯೋಗಿಗಳು ತಕ್ಷಣ ಅವರನ್ನು ರಾಂಪುರ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ವೈದ್ಯರು ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲು ಸಲಹೆ ನೀಡಿದ್ದಾರೆ. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ ಎನ್ನಲಾಗಿದೆ.

## ವಿದ್ಯುತ್ ತಗಲಿ ಎರಡೂವರೆ ವರ್ಷದ ಮಗು ಸಾವು

ಮಲ್ಲಮ್ಮ ನುಡಿ ವಾರ್ತೆ

ಸೇಡಂ, ಏ,27: ಕುರಿ ಓಡಿಸಲು ಹೋದ ಎರಡೂವರೆ ವರ್ಷದ ಆಯೇಷಾ ಸಿದ್ದಿಖಾ ವಿದ್ಯುತ್ ತಗೂಲಿ ಮಗು ಸಾವು ಒಪ್ಪಿದ ಘಟನೆ ನಿನ್ನೆ ನಡೆದಿದೆ. ತಾಲೂಕಿನ ಮಳಖೇಡ ಗ್ರಾಮದಲ್ಲಿರುವ ರಾಷ್ಟ್ರಕೂಟರ ಕೋಟೆ ಒಳಗೆ ಕುರಿ ಮೇಯಿಸಲು ಹೋಗಿದ ದೊಡ್ಡಮ್ಮನ ಜೊತೆ ಮಗು ಹೋಗಿದ್ದು, ಮೊನ್ನೆ ರಾತ್ರಿ ಅತಿ ಹೆಚ್ಚು ಗಾಳಿ ಮಳೆ ಬಂದಿರುವುದರಿಂದ ವಿದ್ಯುತ್ ಕಂಬದ ತಂತಿ ಕಡಿದು ಬಿದ್ದಿರುವುದು ನೋಡದೆ ಇರುವುದರಿಂದ ಮಗುವಿಗೆ ವಿದ್ಯುತ್ ತಗೂಲಿ ಸಾವು ಒಪ್ಪಿದ್ದು ಮಗುವನ್ನು ರಕ್ಷಿಸಲು ಹೋದ ದೊಡ್ಡಮ್ಮನಿಗೂ ವಿದ್ಯುತ್ ತಗಲಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.



ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿರಿ:8073731722

# 20 ಸಾವಿರ ಸಾಲಕ್ಕೆ ರೈತನ ಬಲಿ ತೆಗೆದುಕೊಂಡ ಬಡ್ಡಿ ವ್ಯಾಪಾರ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಏ.30: ಜಮೀನು ವಿಷಯಕ್ಕೆ ಗುಂಪು ಕಟ್ಟಿಕೊಂಡು ಗಂಗಾವತಿ ತಾಲೂಕಿನ ಆಚಾರ ನರಸಾಪುರದಲ್ಲಿ ವೀರಪ್ಪ ಹನುಮಂತಪ್ಪ ಕುರುಬರ ಇವರು ಬೆಳೆದ ಬೆಳೆಯನ್ನು ಕಟಾವು ಮಾಡಲು ಸಾಲ ಕೊಟ್ಟವರು ಬಂದಿದ್ದಾರೆ, ಇದಕ್ಕೆ ಆಕ್ಷೇಪಿಸಿದ ತಂದೆ ಮಕ್ಕಳಿಗೆ ಹಿಗ್ಗಾಮುಗ್ಗ ಬಡಿದಿದ್ದಾರೆ, ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಭೂಮಿಯನ್ನು ಕಸಿದುಕೊಳ್ಳುವ ಭರದಲ್ಲಿ ರೈತ ವೀರಪ್ಪ ಮತ್ತು ಮಗ ಎಲ್ಲಪ್ಪನಿಗೆ ವಿಷ ಕುಡಿಸಿದ್ದಾರೆ. ಕೂಡಲೇ ಇವರನ್ನು ಆಸ್ಪತ್ರೆಗೆ ದಾಖಲಿಸಿದ್ದರು ಸಹ ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳ ಜಿಲ್ಲಾಸ್ಪತ್ರೆಗೆ ಸೇರಿಸಿದ್ದರು. ಘಟನೆ ವಿವರ : ತಂದೆ ಬಡತನದ ಹಿನ್ನೆಲೆಯಲ್ಲಿ ಬಹಳ ವರ್ಷಗಳ ಹಿಂದೆ 20 ಸಾವಿರ ರೂಪಾಯಿ ಸಾಲ ಮಾಡಿದ್ದ. ಈ ಸಾಲಕ್ಕೆ ಅಸಲು ಹಾಗು ಬಡ್ಡಿ ನೀಡಲಾಗಿದೆ. ಆದರೂ ಈ ಸಾಲಕ್ಕೆ ನಿಮ್ಮ ತಂದೆ ಹೊಲ ಬರೆದು–ಕೊಟ್ಟಿದ್ದಾರೆ ಎಂದು ಆರೋಪಿಸಿ ಭೂಮಿಯಲ್ಲಿದ್ದ ಭತ್ತ ಕಟಾವು ಮಾಡಲು ಹೋದವರ ಮೇಲೆ ಹಲ್ಲೆ ಮಾಡಿದ ಘಟನೆ ಗಂಗಾವತಿ ತಾಲೂಕಿನ ಆಚಾರ ನರಸಾಪುರದಲ್ಲಿ ನಡೆದಿದೆ. ಬಲವಂತವಾಗಿ ವಿಷ ಕೊಡಿಸಿದ್ದ ವಡ್ಡರಹಟ್ಟಿಯ ಹನುಮಂತಪ್ಪ ಎಂಬುವವರ ಕುಟುಂಬದವರಿಂದ ತಂದೆ–ಮಗ ಜೀವನ ಮರಣದ ಜೊತೆಗೆ ಕಳೆದ 8 ದಿನಗಳಿಂದ ಹೋರಾಟವನ್ನು ಮಾಡುತ್ತಿದ್ದರು, ಆದರೆ ಮೊನ್ನೆ ಸಾಲ ಪಡೆದಿದ್ದ ವೀರಪ್ಪ ಸಾವನ್ನಪ್ಪಿದ್ದಾನೆ. ಇವರ ಮಗ ಸಹ ಜೀವನ್ಮರಣದ ಜೊತೆ ಜಿಲ್ಲಾ ಆಸ್ಪತ್ರೆಯಲ್ಲಿ ಹೋರಾಟ ಮಾಡಿ ಇಂದು ಆಸ್ಪತ್ರೆಯಲ್ಲಿ ಸಾವನ್ನಪಿದ ಘಟನೆ ನಡೆದಿದೆ ಇಷ್ಟೆಲ್ಲಾ ಅವಾಂತರಗಳಿಗೆ ಕಾರಣರಾದ ಹನುಮಂತಪ್ಪ ಹಾಗೂ ಅವರ ಸಂಗಡಿಗರ ಮೇಲೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದರು ಸಹ, ಮೂರು ಜನರನ್ನು ಮಾತ್ರ ಬಂಧನ ಮಾಡಲಾಗಿದೆ ಉಳಿದವರನ್ನು ಇನ್ನೂ ಬಂಧನ ಮಾಡಿಲ್ಲ ಎಂದು ಮೃತನ ಪತ್ನಿ ಸುವರ್ಣಮ್ಮ ಹೇಳಿದರು. ಬಡವರಿಗೆ ಒಂದು ನ್ಯಾಯ ಶ್ರೀಮಂತರಿಗೆ ಒಂದು ನ್ಯಾಯ ಮಾಡಿ ಇದ್ದವರ ಕಡೆಗೆ ಕಾನೂನು ಇದೆ ಬಡವರಿಗೆ ನ್ಯಾಯ ಇಲ್ಲಾ ಎಂದು ಮೃತನ ಪತ್ನಿ ಜಿಲ್ಲಾ ಆಸ್ಪತ್ರೆ ಕೊಪ್ಪಳದಲ್ಲಿ ಆರೋಪಿಸಿದರು.

# ಸಮ ಸಮಾಜಕ್ಕೆ ಬಸವಣ್ಣನ ಕೊಡುಗೆ ಅನನ್ಯ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಏ.30 ಸಮ ಸಮಾಜಕ್ಕೆ ವಿಶ್ವ ಗುರು ಬಸವಣ್ಣ ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಬಿಜೆಪಿ ಯುವ ಮುಖಂಡ ಗೋಪಾಲರೆಡ್ಡಿ ಹೇಳಿದರು. ತಾಲೂಕಿನ ಜಲಸಂಗಿ ಗ್ರಾಮದಲ್ಲಿ ಯುವಕರ ಬಳಗದ ವತಿಯಿಂದ ಆಯೋಜಿಸಿದ್ದ ವಿಶ್ವ ಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಸಮಾಜದಲ್ಲಿನ ಅಂಕುಡೊಂಕುಗಳನ್ನು ನಿರ್ಮೂಲನೆಗೆ ಹಾಗೂ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಬಸವಣ್ಣನವರು ತಮ್ಮ ಜೀವನವನ್ನೆ ಸವೆಸಿದ ಮಹಾನ್ ನಾಯಕರಾಗಿದ್ದಾರೆ. ಹೀಗಾಗಿ ಎಲ್ಲರೂ ತತ್ವ ಆದರ್ಶಗಳನ್ನು ಪಾಲಿಸಬೇಕು ಎಂದರು. ಈ ಸಂದರ್ಭದಲ್ಲಿ ಸಂಗಣ್ಣ ಬಿದರಡ್ಡಿ, ವೆಂಕಪ್ಪ ರಾಂಪುರೆ, ಅಮೃತ ಹೂಗಾರ್, ರಾಜಪ್ಪ ಪಂಚಾಳ, ಶಿವಪುತ್ರ ಹೂಗಾರ್, ಸಟ್ವಜ್ಜಿ ಗೌಳಿ, ರಾಜು ಹೂಗಾರ್,

ಅನಿಲ್ ಗೌಳಿ, ಭೀಮಶಾ ಮೇತ್ರಿ ಭೀಮ್ ರೆಡ್ಡಿ, ಸಾಗರೆಡ್ಡಿ, ನಾಗೇಶ್ ಹೂಗಾರ್, ವೀರೇಶ್ ರಾಮರಾವ್, ಶರಣಪ್ಪ ರಾಮರೇ, ಶಶಿಕುಮಾರ್ ಕುಂಬಾರ್, ಮಲ್ಲಯ್ಯ ಸ್ವಾಮಿ, ಗುಂಡು ರೆಡ್ಡಿ, ಲಾಲಪ್ಪ ಜಮಾದಾರ್, ನರಸಿಂಗ ಗೌಳಿ, ಸುನಿಲ್ ಪುಟ್ಟರಾಜ್ ಇದ್ದರು.

# ಮನೆಗೆ ಬೆಂಕಿ:ದವಸ ಧಾನ್ಯ ನಾಶ



ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಏ.30–ದವಸ ಧಾನ್ಯಗಳನ್ನು ಸಂಗ್ರಹಿಸಿದ್ದ ತೋಟದ ಮನೆಯೊಂದಕ್ಕೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದರಿಂದ ಧಾನ್ಯಗಳು ಸುಟ್ಟು ಕರಕಲಾಗಿ ಅಪಾರ ಪ್ರಮಾಣದ ನಷ್ಟವುಂಟಾದ ಘಟನೆ ತಾಲೂಕಿನ ಚಿಕ್ಕಸಂಶಿ ಗ್ರಾಮದ ವ್ಯಾಪ್ತಿಯಲ್ಲಿ ಬುಧವಾರ ಬೆಳಗಿನ ಜಾವ ಸಂಭವಿಸಿದೆ.

ಚಿಕ್ಕಸಂಶಿ ಗ್ರಾಮದ ಮಂಜು ಬಿರಾದಾರ ಪಾಟೀಲ ಸಹೋದರರಿಗೆ ಸೇರಿದ ತೋಟದಲ್ಲಿ ಈ ಘಟನೆ ನಡೆದಿದ್ದು, 70 ಚೀಲ ಶೆಂಗಾ, 10 ಚೀಲ ಗೋಧಿ, 10 ಚೀಲ ಜೋಳ ಸೇರಿ ಇನ್ನಿತರ ವಸ್ತುಗಳು ಬೆಂಕಿಯಲ್ಲಿ ಬೆಂದು ಹೋಗಿದ್ದು ಅಂದಾಜು 8 ಲಕ್ಷ ರೂ.ಗಳ ಹಾನಿ ಅಂದಾಜಿಸಲಾಗಿದೆ.

ಕಿಟಕಿಯ ಮೂಲಕ ಪೆಟ್ರೋಲ್ ಚಿಮ್ಮಿಸಿ ಬೆಂಕಿ ಹಚ್ಚಲಾಗಿದೆ ಎಂದು ಹೇಳಲಾಗಿದ್ದು, ಇದು ವಿರೋಧಿಗಳ ದೃಷ್ಕೃತ್ಯ ಎಂದು ತೋಟದ ಮನೆಯವರು ಹೇಳಿದ್ದಾರೆ.

# ಕಲಬುರಗಿ ಕಾಂಗ್ರೆಸ್ ಮುಖಂಡ,ಎಚ್‌ಕೆಇ ಸಂಸ್ಥೆ ಮಾಜಿ ಅಧ್ಯಕ್ಷನ ಮೇಲೆ ಇಡಿ ದಾಳಿ





ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಏ. 30: ಹೆಚ್‌ಕೆಇ ಸೊಸೈಟಿಯ ಮಾಜಿ ಅಧ್ಯಕ್ಷ, ಕಲಬುರಗಿ ಕಾಂಗ್ರೆಸ್ ಮುಖಂಡ ಭೀಮಾಶಂಕರ್ ಬಿಲಗುಂದಿ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ದಾಳಿ ಮಾಡಿದ್ದಾರೆ.

ಇಂದು (ಏ. 30) ನಾಲ್ವರು ಅಧಿಕಾರಿಗಳ ತಂಡ ಏಕಕಾಲಕ್ಕೆ ಕಲಬುರಗಿಯ ರಿಂಗ್ ರೋಡ್ ಬಳಿಯಿರುವ ಭೀಮಾಶಂಕರ್ ಬಿಲಗುಂದಿ ಅವರ ಮನೆ ಮೇಲೆ ದಾಳಿ ಮಾಡಿದ್ದು, ದಾಖಲೆ ಪರಿಶೀಲನೆ ನಡೆಸಿದ್ದಾರೆ. ಎಂಆರ್ ಎಂ ಸಿ ಮೇಡಿಕಲ್ ಕಾಲೇಜಿನ 700 ಜನ ಎಂಬಿಬಿಎಸ್ ವಿದ್ಯಾರ್ಥಿಗಳ ಶಿಷ್ಯವೇತನ(ಸ್ಕಾಲರ್‌ಶಿಪ್) ಹಗರಣ ಮಾಡಿರುವ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಇಡಿ ದಾಳಿ ಮಾಡಿರುವ ಶಂಕೆ ವ್ಯಕ್ತವಾಗಿದೆ.

2018 ರಿಂದ 2024 ರ ವರೆಗೆ ಹೈದರಾಬಾದ್ ಶಿಕ್ಷಣ ಸಂಸ್ಥೆಗೆ ಎರಡು ಅವಧಿಗೆ ಅಧ್ಯಕ್ಷರಾಗಿದ್ದ ಭೀಮಾಶಂಕರ್ ಬಿಲಗುಂದಿ ವಿರುದ್ಧ ಎಂಆರ್ ಎಂಸಿ ಮೇಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಶಿಷ್ಯವೇತನ ಹಗರಣ ಆರೋಪ ಕೇಳಿಬಂದಿತ್ತು. 700 ಜನ ಎಂಬಿಬಿಎಸ್ ವಿದ್ಯಾರ್ಥಿಗಳ ಸುಮಾರು 80 ಕೋಟಿ ರೂ. ಅಧಿಕ ಹಣ ನೀಡದೆ ವಂಚನೆ ಮಾಡಿರುವ ಆರೋಪ ಇವರ ಮೇಲೆ ಕೇಳಿಬಂದಿತ್ತು. ಕಳೆದ ವರ್ಷ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಣ ನೀಡದೇ ವಂಚಿಸಿದ್ದ ಆರೋಪ ಇತ್ತು. ಸದ್ಯ ಅದೇ ಹಗರಣದ ಹಣಕಾಸಿನ ಅವ್ಯವಹಾರದ ಬಗ್ಗೆ ಇಡಿ ಅಧಿಕಾರಿಗಳು ದಾಳಿ ಮಾಡಿರಬಹುದು ಎನ್ನಲಾಗಿದೆ.

ಈ ಸಂಬಂಧ ಭೀಮಾಶಂಕರ ಬಿಲಗುಂದಿ, ಡಾ.ಎಸ್.ಎಂ.ಪಾಟೀಲ, ಸುಭಾಷ ಜಗನ್ನಾಥ ಅವರ ಮನೆಗಳಲ್ಲಿ ಶೋಧ ನಡೆಸಲಾಗಿದೆ.

# ಅನಗತ್ಯ ಹೇಳಿಕೆ ನೀಡದಂತೆ ಎಐಸಿಸಿ ಖಡಕ್ ಸೂಚನೆ

ನವದೆಹಲಿ:ಏ.30: ಕಾಂಗ್ರೆಸ್‌ನಲ್ಲಿ ಈಗ ಮಾಯ ಮಂತ್ರದೇ ಚರ್ಚೆ. ಗಾಯಬ್ ಪೋಸ್ಟ್ ಪಾಕಿಸ್ತಾನದಲ್ಲಿ ಫೇಮಸ್ ಆಗ್ತಿದ್ದಂತೆ ಇತ್ತ ಕಾಂಗ್ರೆಸ್ ವಿಲವಿಲ ಒದ್ದಾಡಿದೆ. ಇದೀಗ ಪೋಸ್ಟ್ ಡಿಲೀಟ್ ಮಾಡಿ, ಎಲ್ಲಾ ಬಾಯಿ ಮುಚ್ಕೊಂಡು ಇರಿ ಅಂತಾ ಕಾಂಗ್ರೆಸ್ ನಾಯಕರಿಗೆ ಎಐಸಿಸಿ ಖಡಕ್ ಎಚ್ಚರಿಕೆ ಕೊಟ್ಟಿದೆ.

ಪೆಹಲ್ಗಾಮ್ ದಾಳಿ ವಿಚಾರದಲ್ಲಿ ಮೋದಿ ಟೀಕಿಸುವ ಶರವೇಗದಲ್ಲಿ ಕಾಂಗ್ರೆಸ್ ಗಾಯಬ್ ಪೋಸ್ಟ್ ಹಾಕಿ ಈಗ ಗಾಯಬ್ ಗಾಯಬ್ ಅನ್ನುತ್ತಿದೆ. ಗಾಯಬ್ ಪೋಸ್ಟ್ ಬಳಸಿಕೊಂಡು ರಂಗಿನಾಟ ಆಡಿದ ಪಾಕಿಸ್ತಾನದ ಕೇಕೆ ಕಾಂಗ್ರೆಸ್‌ಗೆ ಹಿಂಬೆಂಕಿಯಾಗಿದೆ. ಈ ಬೆನ್ನಲ್ಲೇ ಕಾಂಗ್ರೆಸ್‌ನ ಕೆಲ ನಾಯಕರ ಆಕ್ಷೇಪದಿಂದ ಗಾಯಬ್ ಪೋಸ್ಟ್ ಡಿಲೀಟ್ ಮಾಡಲಾಗಿದ್ದು, ಎಲ್ಲಾ ನಾಯಕರು ಸಹ ಗಾಯಬ್ ಪೋಸ್ಟ್ ಡಿಲೀಟ್ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರ ವಿವಾದಾತ್ಮಕ ಹೇಳಿಕೆಗಳು, ಪೋಸ್ಟ್‌ನಿಂದ ಎಐಸಿಸಿ ಹೈರಾಣಾಗಿದ್ದು, ಯಾವುದನ್ನ, ಯಾರನ್ನ ಸಮರ್ಥನೆ ಮಾಡ್ಕೋಬೇಕು ಅನ್ನೋದೇ ಅರ್ಥವಾಗದೇ ಹೋಗಿದೆ. ಪೆಹಲ್ಗಾಮ್ ವಿಚಾರದಲ್ಲಿ ಸ್ವಲ್ಪ ಎಚ್ಚರ ತಪ್ಪಿ ಮಾತನಾಡಿದ್ರೂ ಕಾಂಗ್ರೆಸ್‌ಗೆ ಕುತ್ತು ಎಂಬುದು ಗೊತ್ತಿದೆ. ಹಾಗಾಗಿ ಎಲ್ಲಾ ನಾಯಕರಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬಹಿರಂಗ ಪತ್ರ ಬರೆದು ಎಚ್ಚರಿಕೆ ಕೊಟ್ಟಿದ್ದಾರೆ. ಪೆಹಲ್ಗಾಮ್ ವಿಚಾರದಲ್ಲಿ ಯಾರೂ ಅನಗತ್ಯ ಹೇಳಿಕೆ ಕೊಡಬಾರದು, ಕೊಟ್ಟರೆ ಶಿಸ್ತು ಕ್ರಮ ಎಂದು ವಾರ್ನಿಂಗ್ ನೀಡಿದ್ದಾರೆ.

ಈ ನಡುವೆ ಎಐಸಿಸಿ ಸೂಚನೆ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಸಹ ಎಚ್ಚೆತ್ತುಕೊಂಡಿದ್ದು, ಮಾಯ ಪೋಸ್ಟ್ ಡಿಲೀಟ್ ಮಾಡಿದೆ.

ಅಲ್ಲದೇ ಕಾಂಗ್ರೆಸ್ ನಾಯಕರು ಸದ್ಯಕ್ಕೆ ಗಪ್ ಚುಪ್ ಆಗಿದ್ದಾರೆ. ಒಟ್ನಲ್ಲಿ ರಾಜಕೀಯ ರಣಮೇಳದಲ್ಲಿ ಮೋದಿ ಟಾರ್ಗೆಟ್ ಮಾಡಲು ಹೋದ ಗಾಯಬ್ ಪೋಸ್ಟ್ ಕಾಂಗ್ರೆಸ್‌ಗೆ ತಿರುಗುಬಾಣ ಆಗಿದ್ದು, ಇದೆಲ್ಲಾ ಬೇಕಿತ್ತಾ ಎಂಬ ಪ್ರಶ್ನೆಗಳಿಗೆ 'ಕೈ' ನಾಯಕರೇ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

# ಕಲಬುರಗಿಯಲ್ಲಿ ವಚನ ಮಂಟಪ ನಿರ್ಮಾಣ:ಡಾ.ಶರಣಪ್ರಕಾಶ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.30: ಹನ್ನೆರಡನೇ ಶತಮಾನದಲ್ಲಿ ಜಾತಿ ರಹಿತ ಸಮ–ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬದುಕಿನುದ್ದಕ್ಕೂ ಸರ್ವ ಜೀವಿಗೂ ಲೇಸನ್ನೆ ಬಯಸಿದ್ದ ಬಸವಣ್ಣ ಮತ್ತು ಬಸವಾದಿ ಶರಣರ ವಚನಗಳು ಇಡೀ ವಿಶ್ವಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ಕಲಬುರಗಿಯಲ್ಲಿ ವಚನ ಮಂಟಪ ನಿರ್ಮಾಣ ಮಾಡಲಾಗುವುದು ಎಂದು ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ಕಲಬುರಗಿ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಯಂತ್ಯೋತ್ಸವ ಸಮಿತಿಯ ಸಂಯುಕ್ತಾಶ್ರಯದಲ್ಲಿ ಬುಧವಾರ ಇಲ್ಲಿನ ಜಗತ್ ವೃತ್ತದಲ್ಲಿರುವ ಸಾಂಸ್ಕೃತಿಕ ನಾಯಕ ಬಸವೇಶ್ವರರ ಅಶ್ವಾರೋಹಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ವೇದಿಕೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಕಳೆದ 2024–25ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಇದನ್ನು ಘೋಷಿಸಿದ್ದು, ಕೂಡಲೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ. ಹೀಗಾಗಿ ಜಿಲ್ಲಾಡಳಿತದಿಂದ ನೀಲಿ ನಕ್ಷೆ ತಯಾರಿಸುವ ಕೆಲಸ ನಡೆದಿದೆ ಎಂದರು.

ಯಾರ ಹಂಗಿಲ್ಲದೆ ಸಹಬಾಳ್ವೆಯ ಜೀವನ ನಡೆಸಿದ ಬಸವಾದಿ ಶರಣರ ಜೀವನ ನಮಗೆಲ್ಲ ಆದರ್ಶಪ್ರಾಯವಾಗಿದೆ. ಅಕ್ಕಮಹಾದೇವಿ, ಸತ್ಯಕ್ಕ, ಐದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯ ಹೀಗೆ ಅನೇಕ ಶರಣರು ಮನುಕುಲದ ಉದ್ದಾರಕ್ಕೆ ದುಡಿದಿದ್ದಾರೆ. ಬಸವಾದಿ ಶರಣರ ವಚನಗಳಿಗೆ ಬದಕು ಬದಲಾಯಿಸುವ ಬಹುದೊಡ್ಡ ಶಕ್ತಿ ಇದ್ದು, ಮುಂದಿನ ಪೀಳಿಗೆಗೆ ಇದನ್ನು ತಿಳಿಸಬೇಕಿದೆ. ಲಿಂಗ ಪೂಜೆ, ಬಸವ ಸಂಸ್ಕೃತಿ ಪರಂಪರೆ ಉಳಿಸಿ ಬೆಳೆಸಬೇಕಿದೆ ಎಂದು ಕರೆ ನೀಡಿದರು.

ಲಿಂಗ ಕಟ್ಟದವರು ಬಸವಣ್ಣನ ಅನುಯಾಯಿಗಳಾಗಬಹುದು: ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಮಾತನಾಡಿ ಲಿಂಗ ಕಟ್ಟಿದವರೆ ಬಸವಣ್ಣನವರ ಅನುಯಾಯಿಗಳಾಗಬೇಕಿಲ್ಲ. ಲಿಂಗ ಕಟ್ಟದವರು ಸಹ ಅನುಯಾಯಿಗಳಾಗಬಹುದು. ಕೆಳ ವರ್ಗದಿಂದ ಬಂದ ಈ ಸಮುದಾಯ ಲಿಂಗ ಕಟ್ಟಿಕೊಂಡಿದ್ದರಿಂದಲೆ ಲಿಂಗಾಯತರಾಗಿದ್ದೇವೆ. ದಲಿತ ಕೇರಿಯಲ್ಲಿ ಹುಟ್ಟಿದ ಅಂಬೇಡ್ಕರ್ ಅವರ ಜಯಂತಿಯನ್ನು ದಲಿತ ಸಂಘರ್ಷ ಸಮಿತಿಯು ನಾಡಿನಾದ್ಯಂತ ಬುದ್ದ–ಬಸವ–ಅಂಬೇಡ್ಕರ್ ಪರಿಕಲ್ಪನೆಯಲ್ಲಿ ರಾಜ್ಯದುದ್ದಕ್ಕೂ ಪಸರಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ದುಡಿಯುವ ವರ್ಗಕ್ಕೆ ಗೌರವ ನೀಡಿದ, ಪ್ರೀತಿಸಿದ, ಕೆಳ ವರ್ಗದವರನ್ನು ಅಪ್ಪಿಕೊಂಡು ಅಂತರ್ಜಾತಿ ವಿವಾಹ ಮಾಡುವ ಮೂಲಕ ಜಾತಿ ವಿನಾಶ ಮಾಡಿದ ಬಸವಣ್ಣನವರು, ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದಲ್ಲದೆ ಸಮತಾವಾದದ ಸಂದೇಶ ಸಾರಿದರು ಎಂದರು.

ವ್ಯಕ್ತಿಯನ್ನು ವೈಭವೀಕರಿಸುವ ಬದಲು ವಿಚಾರಗಳನ್ನು ವೈಭವೀಕರಿಸಬೇಕಿದೆ. ಅದು ಬಸವಣ್ಣನವರಾಗಲಿ, ಅಂಬೇಡ್ಕರ್‌ರವರಾಗಲಿ. ವ್ಯಕ್ತಿ ವೈಭವೀಕರಿಸಿದರೆ ವಿಚಾರ ಸತ್ತು ಹೋಗುತ್ತದೆ. ಬಸವಣ್ಣ ದೇವರನ್ನು ಹುಡಿಕಿ ದೇವಸ್ಥಾನಕ್ಕೆ ಹೋಗಿಲ್ಲ, ದೇವರನ್ನೆ ಎತ್ತಿಕೊಂಡು ಕೊರಳಲ್ಲಿ ಕಟ್ಟಿಕೊಂಡರು. ಯಾಕೆಂದ್ರೆ ದೇವರು ಯಾರಿಗೆ ಸಿಕ್ಕಿಲ್ಲ, ಸಿಗುವುದಿಲ್ಲ ಅದು ಅಡ್ರೆಸ್ಸು ಇಲ್ಲ ಎಂದು ಮಾರ್ಮಿಕವಾಗಿ ನುಡಿದ ಅವರು, ಬಸವಣ್ಣನವರ ಆಚಾರ ವಿಚಾರಗಳನ್ನು ಹೆಚ್ಚು ಪಸರಿಸಬೇಕೆಂದು ಕರೆ ನೀಡಿದರು. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ? ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ ಎಂಬ ಅಕ್ಕಮಹಾದೇವಿಯ ವಚನ ಪಠಿಸಿದ ಅವರು, ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕೆಂಬ ಸಂದೇಶವನ್ನು ತಮ್ಮಂತಹ ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಈ ವಚನಗಳೇ ಸ್ಫೂರ್ತಿಯಾಗಿವೆ ಎಂದರು.

ಕಾಯಕ ಶರಣರ ಸಮುದಾಯವನ್ನು ಅಪ್ಪಿಕೊಳ್ಳಬೇಕಿದೆ: ಅಫಜಲಪೂರ ಶಾಸಕರು ಮತ್ತು ಜಯಂತ್ಯೋತ್ಸವ ಸಮಿತಿ ಅಧ್ಯಕ್ಷರಾಗಿರುವ ಎಂ.ವೈ.ಪಾಟೀಲ ಅವರು ಮಾತನಾಡಿ, ನಮ್ಮಿಂದ ಕಾಯಕ ಶರಣರು ದೂರಾಗಿದ್ದು, ಅವರೆಲ್ಲರನ್ನು ಅಪ್ಪಿಕೊಂಡು ಒಪ್ಪಿಕೊಳ್ಳಬೇಕಿದೆ. ಬುದ್ದ ರಾಜತ್ವವನ್ನು ಧಿಕ್ಕರಿಸಿ ಸಮ–ಸಮಾಜ ನಿರ್ಮಾಣಕ್ಕೆ ಕರೆ ಕೊಟ್ಟರು. ಬಸವಣ್ಣ ಜಾತಿ ಪದ್ದತಿ ಹೋಗಲಾಡಿಸಲು ಸಾಮಾಜಿಕ ಕ್ರಾಂತಿಗೆ ಕಾರಣ–ರಾದರು. ಬುದ್ದ ಮತ್ತು ಬಸವನ ಆಶಯಗಳನ್ನು ಸಂವಿಧಾನದ ರೂಪದಲ್ಲಿ ಜಾರಿಗೆ ತಂದು ಇಡೀ ದೇಶದ ನಿವಾಸಿಗಳಿಗೆ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಸಮಾನತೆಯ ಹರಿಕಾರನಾಗಿ ಗುರುತಿಸಿಕೊಂಡರು. ಹಿಂದೆಲ್ಲ ಬಸವ ಜಯಂತಿ ಎತ್ತಿನ ಮೆರವಣಿಗೆ ಸೀಮಿತವಾಗಿತ್ತು. ವಚನ ಸಾಹಿತ್ಯ ಸಿಕ್ಕ ಬಳಿಕ ವೈಚಾರಿಕವಾಗಿ ಬಸವ ಜಯಂತಿ ಆಚರಿಸಲಾಗುತ್ತಿದೆ ಎಂದರು.

ಬಸವಣ್ಣನ ಕರ್ಮಭೂಮಿ ಕಲ್ಯಾಣ: ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ನಿವೃತ್ತ ಪ್ರಾಧ್ಯಾಪಕ ಡಾ.ದುರ್ಗಾದಾಸ್ ಮಾತನಾಡಿ ಬಸವಣ್ಣನ ಕರ್ಮಭೂಮಿ ಕಲ್ಯಾಣ ಕರ್ನಾಟಕ ಪ್ರದೇಶ. ಹೀಗಾಗಿ ಇಲ್ಲಿ ಬಸವಣ್ಣ ನಡೆದಾಡಿದ ಅಚ್ಚಳಿಯ ನೆನಪು ಇಂದಿಗೂ ಇದೆ. ಬಳಸಲು ಕಷ್ಟವಾಗಿರುವ ವೇದ, ಸಂಸ್ಕೃತ, ಶ್ಲೋಕ ಪದಗಳ ಬದಲಾಗಿ ಅನುಭವದ ಕುಲುಮೆಯಲ್ಲಿ ಹೊರಹೊಮ್ಮಿದ ವಚನಗಳನ್ನು ಬಸವಾದಿ ಶರಣ–ರು ನಾಡಿಗೆ ನೀಡಿದ್ದಾರೆ. ಬದುಕಿನ ದಾರಿದೀಪವಾಗಿರುವ ಈ ವಚನಗಳು ನಮಗೆ "ಚಿನ್ನ"ವಾಗಿವೆ. ಬಾಲ್ಯದಲ್ಲಿಯೆ ಕುಟುಂಬದಲ್ಲಿನ ಮೂಢನಂಬಿಕೆ, ಅಂಧಕಾರ ವಿರೋಧಿಸಿದ್ದ ಬಸವಣ್ಣನವರು ನಂತರ ಬಿಜ್ಜಳದ ರಾಜಧಾನಿ ಕಲ್ಯಾಣಕ್ಕೆ ಬಂದು ಕಾಯಕ ಶರಣರೆಲ್ಲರನ್ನು ಒಗ್ಗೂಡಿಸಿ ಜಾತಿ ರಹಿತ, ಸಮ–ಸಮಾಜ ನಿರ್ಮಾಣ ಮಾಡಿದ ಮಹಾನ್ ಮಾನವತಾವಾದಿಯಾಗಿದ್ದಾರೆ ಎಂದರು.

ಡಿ.ಸಿ.ಗೆ ಸನ್ಮಾನ: ಇದೇ ಸಂದರ್ಭದಲ್ಲಿ 2024ನೇ ಸಾಲಿನ ಉತ್ತಮ ಜಿಲ್ಲಾ ಚುನಾವಣಾಧಿಕಾರಿಗಳೆಂದು ಭಾರತ ಚುನಾವಣಾ ಆಯೋಗದಿಂದ ಪ್ರಶಸ್ತಿ ಪಡೆದಿರುವ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರಿಗೆ ವೇದಿಕೆಯಲ್ಲಿ ಸಚಿವರಾದಿಯಾಗಿ ಗಣ್ಯರು ಸನ್ಮಾನಿಸಿದರು. ಇದಲ್ಲದೆ ಇತ್ತೀಚೆಗೆ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ 982ನೇ ರ‍್ಯಾಂಕ್ ಗಳಿಸಿದ ಡೋರ ಜಂಬಗಾ ಗ್ರಾಮದ ಯುವಕ ಮೋಹನಕುಮಾರ ಸಾಧನೆ ಗುರುತಿಸಿ ಅವರ ಪೋಷಕರನ್ನು ಇಂದಿಲ್ಲಿ ಸತ್ಕರಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀಶೈಲಂ ಸಾರಂಮಠದ ಜಗದ್ಗುರು ಡಾ. ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಷಟಸ್ಥಲಧ್ವಜಾರೋಹಣ ಮಾಡಿದಲ್ಲದೆ ಆಶೀರ್ವಚನ ನೀಡಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕರಾದ ಬಿ.ಜಿ.ಪಾಟೀಲ, ತಿಪ್ಪಣ್ಣಪ್ಪ ಕಮಕನೂರ, ಶಶೀಲ ಜಿ. ನಮೋಶಿ, ಕರ್ನಾಟಕ

ಪರಿಸರ ಮಾಲಿನ ನಿಯಂತ್ರಣ ಮಂಡಳಿ ಸದಸ್ಯರು ಮತ್ತು ವೀರಶೈವ ಮಹಾಸಭೆ ಜಿಲ್ಲಾಧ್ಯಕ್ಷ ಶರಣು ಮೋದಿ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ. ಶರಣಪ್ಪ,

ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತೆ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರ, ಅರುಣಕುಮಾರ, ನೀಲಕಂಠ ಮೂಲಗೆ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಇದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರೆ ಸೋಮಶೇಖರ್ ಹಿರೇಮಠ ವಂದಿಸಿದರು. ಶ್ರೀಶೈಲ್ ಗೂಳಿ ನಿರೂಪಿಸಿದರು.

# ವಚನ ಸಾಹಿತ್ಯಕ್ಕೆ ದಲಿತ ವಚನಕಾರರ ಕೊಡುಗೆ ಅನನ್ಯ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : 12ನೇ ಶತಮಾನದಲ್ಲಿ ವಚನ ಸಾಹಿತ್ಯಕ್ಕೆ ದಲಿತ ವಚನಕಾರರು ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಬಸವಕಲ್ಯಾಣದ ಕಲ್ಯಾಣ ಮಹಾಮನೆ ಪೀಠದ ಪೀಠಾಧಿಪತಿ ಬಸವಪ್ರಭು ಹೇಳಿದರು. ತಾಲೂಕಿನ ದುಬಲಗುಂಡಿ ಗ್ರಾಮದ ಮಾದರ ಚನ್ನಯ್ಯ ದೇವಸ್ಥಾನದಲ್ಲಿ ಬುಧವಾರ ನಡೆದ ಮಾದರ ಚನ್ನಯ್ಯನವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸಭೆ ಉದ್ದೇಶಿಸಿ ಮಾತನಾಡಿದರು.

ವಚನಕಾರರಾದ ಉರಿಲಿಂಗಪೆದ್ದಿ, ಮಾದಾರ ಧೂಳಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಸೇರಿದಂತೆ ತಳ ಸಮುದಾಯದ ಬಹುತೇಕ ವಚನಕಾರರನ್ನು ಅನುಭವ ಮಂಟಪದಲ್ಲಿ ಪ್ರಾಮುಖ್ಯತೆ ನೀಡಿ ಅವರ ಅನುಭವನಗಳನ್ನು ವಚನಗಳ ರೂಪದಲ್ಲಿ ಕಟ್ಟಿಕೊಡುವಲ್ಲಿ ಬಸವಣ್ಣನವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ತಿಳಿಸಿದರು.

ತಡೋಳ ಆಶ್ರಮದ ಪೀಠಾಧಿಪತಿ ರಾಜೇಶ್ವರ ಶಿವಾಚಾರ್ಯ ಮಾತನಾಡಿ, 12ನೇ ಶತಮಾನದ ಶರಣರು ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಮಹಾನ್ ಶರಣರ ವಚನಗಳ ಸಾರವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನ ನಡೆಸಬೇಕು ಎಂದರು. ಈ ಸಂದರ್ಭದಲ್ಲಿ ಹವಾ ಮಲ್ಲಿನಾಥ ಮಹಾರಾಜ, ಗ್ರಾಪಂ. ಅಧ್ಯಕ್ಷ ನಾಗರಾಜ ಭೋಜಗುಂಡಿ, ಗ್ರಾಪಂ. ಸದಸ್ಯ ಜೈರಾಮ ಖಜೂರೆ, ಡಿಎಂಎಸ್ ಎಸ್ ರಾಜ್ಯಾಧ್ಯಕ್ಷ ಲಿಗರಾಜ ತಾರಫಲ್, ಜಿಪಂ. ಮಾಜಿ ಸದಸ್ಯ ಗುಂಡುರೆಡ್ಡಿ, ಉದ್ಯಮಿ ಸುಭಾಷ ಗಂಗಾ, ಸ್ವತಂತ್ರರಾವ ಸಿಂಧೆ, ಡಾ. ಪ್ರಹ್ಲಾದ್ ಚಂಗಟೆ, ದಾಮೋದರ ಜೀ, ಸುಮಂತ ಕಟ್ಟಿಮನಿ, ತಾಪಂ. ಮಾಜಿ ಸದಸ್ಯ ಪರಮೇಶ್ವರ ಕಾಳಮಂದರ್ಗಿ, ರಮೇಶ ಖಜೂರೆ, ಅಪ್ಪಣ್ಣ ಚೀನಕೇರಾ, ಝರೆಪ್ಪ ಕೇರೂರ್, ಕಾಮಣ್ಣ ಕಾಳಮಂದರ್ಗಿ, ವೈಜಿನಾಥ ಚೀನಕೇರಾ, ಧಶರಥ ಖಜೂರೆ, ಪುಟ್ಟರಾಜ ಖಜೂರೆ, ವಿನೋಧ ಚಂದನಹಳ್ಳಿ, ಅಮರ ಖಜೂರೆ, ಪ್ರವೀಣ ಖಜೂರೆ ಸೇರಿ ಅನೇಕರಿದ್ದರು.

# ಎಲ್‌ಕೆಜಿ-ಯುಕೆಜಿ ದಾಖಲಾತಿಗೆ ವಯಸ್ಸಿನ ಮಿತಿ ಸಡಿಲ ಇಲ್ಲ: ಶಿಕ್ಷಣ ಇಲಾಖೆ

ಬೆಂಗಳೂರು:ಏ.30:2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅನ್ವಯ ಆಗುವಂತೆ ಒಂದನೇ ತರಗತಿಗೆ ಮಾತ್ರ ದಾಖಲಾತಿ ವಯಸ್ಸಿನ ಮಿತಿ ಸಡಿಲ ಮಾಡಲಾಗಿದೆ. ಎಲ್‌ಕೆಜಿ–ಯುಕೆಜಿಗೆ ವಯಸ್ಸಿನ ಮಿತಿ ಸಡಿಲ ಇಲ್ಲ ಎಂದು ಸರ್ಕಾರ ಸ್ಪಷ್ಟವಾಗಿ ಆದೇಶ ಹೊರಡಿಸಿದೆ.

ಇತ್ತೀಚಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಒಂದನೇ ತರಗತಿ ದಾಖಲಾತಿ ಮಿತಿಯನ್ನು 5 ವರ್ಷ 5 ತಿಂಗಳಿಗೆ ಕಡಿತ ಮಾಡಿ ಆದೇಶ ಮಾಡಿದ್ದರು. ಈ ಆದೇಶ ಎಲ್‌ಕೆಜಿ–ಯುಕೆಜಿ ಮಕ್ಕಳ ದಾಖಲಾತಿಗೆ ಗೊಂದಲ ಉಂಟು ಮಾಡಿಸಿತ್ತು. ಹೀಗಾಗಿ ಈ ಬಗ್ಗೆ ಸ್ಪಷ್ಟನೆ ನೀಡಿರುವ ಶಿಕ್ಷಣ ಇಲಾಖೆ , ವಯಸ್ಸಿನ ಮಿತಿ ಸಡಿಲ ಒಂದನೇ ತರಗತಿಗೆ ಈ ವರ್ಷಕ್ಕೆ ಮಾತ್ರ ಅನ್ವಯ. 2025–26ನೇ ಸಾಲಿಗೆ ಎಲ್‌ಕೆಜಿ–ಯುಕೆಜಿಗೆ ದಾಖಲಾತಿ ಆಗುವ ಮಕ್ಕಳಿಗೆ ಈ ನಿಯಮ ಅನ್ವಯ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಎಲ್‌ಕೆಜಿಗೆ ದಾಖಲಾಗಲು 4 ವರ್ಷ, ಯು–ಕೆಜಿಗೆ ದಾಖಲಾಗಲು 5 ವರ್ಷ ಕಡ್ಡಾಯವಾಗಿ ತುಂಬಿರಬೇಕು ಎಂದು ಆದೇಶ ಹೊರಡಿಸಿದೆ. ಸರ್ಕಾರದ ಆದೇಶವನ್ನು ಎಲ್ಲಾ ಜಿಲ್ಲೆಯ ಡಿಡಿಪಿಐಗಳು, ಬಿಇಓಗಳು ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.